May 157 1946

ಗುಣವಿವೇಚನೆ

ಅಥವಾ

ಕನ್ನಡ ಭಾಷಾಭ್ಯಾಸದ ಗುಟ್ಟು.

ಚಿ. ಶ್ರೀ. ಕುಲಕರ್ಣಿ, ಎಸ್. ಟಿ. ಸಿ.

ಬೆಲೆ ೮ ಆಣೆ

ಗುಣವಿವೇಚನೆ.

೧. ಗುಣದೋಷ ವಿಚಾರ.

ಗದ್ಯಭಾಗವೇ ಆಗಲಿ ಪದ್ಯಭಾಗವೇ ಆಗಲಿ ಅದರ ಗುಣಾವಗುಣಗಳನ್ನು ವಿವೇಚಿಸುವದು ನಿಜವಾದ ಓದಿನ ಧ್ಯೇಯ. ಯಾವ ಭಾಗವು ಯಾವ ರೀತಿಯಿಂದ ಇರುವದೆಂಬುದನ್ನು ಅರಿಯುವದು ಅತ್ಯವಶ್ಯ. ಜನಗಳು ತಮ್ಮ ಅಭಿಪ್ರಾಯಗಳನ್ನು ಬೇಕಾದ ಹಾಗೆ ವಾಕ್ಯಗಳನ್ನು ತೆರತೆರನಾಗಿ ಕಲ್ಪಿಸಿಕೊಳ್ಳುವರು. ಒಬ್ಬೊಬ್ಬನ ಮಾತು ಒಂದೊಂದು ಸರಣಿ ಅಥವಾ ಶೈಲಿಯಲ್ಲಿರುವದು. ಯಾವ ಪ್ರಕಾರವಾಗಿ ಅಡಿಗೆಯ ರುಚಿಯನ್ನು ಬಲ್ಲವನು ಇದು ಸೀಹಿ, ಇದು ಹುಳಿ ಎಂದು ಕಂಡು ಹಿಡಿಯುವನೋ, ಅದೇ ಪ್ರಕಾರವಾಗಿ ವಾಚಕನು ಇದು ಗಂಭೀರ ಶೈಲಿ, ಇದು ಸುಲಭ ಶೈಲಿ, ಇದು ಸ್ವಾರಸ್ಯ ಪೂರ್ಣ ಶೈಲಿ, ಎಂದು ಮುಂತಾಗಿ ತಿಳಕೊಳ್ಳಬೇಕಾಗುವದು. ಈ ಶೈಲಿಯು ಕಾಲಭೇದದಿಂದಲೂ ದೇಶಭೇದದಿಂದಲೂ ಜನಭೇದದಿಂದಲೂ ಬೇರೆಬೇರೆಯಾಗಿ [illegible] ರ ಶೈಲಿಯು ಈಗಿಲ್ಲ. [illegible] ಷೆಯ ಶೈಲಿಗಿಂತ ಭಿ[illegible] ಪೌರಸ್ತ್ಯರಲ್ಲಿ ಕ[illegible]ದರೆ ಭಿನ್ನ ಭಿನ್ನ ಜನ[illegible] ಮತ್ತು ಭಿನ್ನ

ಭಿನ್ನ ಮತದವರು ಇರುತ್ತಾರೆ. ಅಂತೂ ವಾಕ್ಯದ ರೀತಿಯು
ಬೇರೆಬೇರೆಯಾಗಿಯೇ ಇದೆ. ಭಾಷಾ ಪ್ರಪಂಚದಲ್ಲಿ ವಾಕ್ಯದ
ಶೈಲಿಯು ಚನ್ನಾಗಿರಬೇಕು. ಹಾಗಿದ್ದ ಮಾತ್ರವೇ ಅದು ವಾ
ಚಕರ ಅಥವಾ ಕೇಳುವವರ ಮನಸ್ಸಿಗೆ ಚನ್ನಾಗಿ ಹೊಳೆಯು
ವದು. ಇಲ್ಲವಾದರೆ ಅಭಿಪ್ರಾಯವು ಎಷ್ಟು ಚನ್ನಾಗಿದ್ದರೂ
ಉದ್ದೇಶವು ಸಫಲವಾಗದೆ ಹೋಗುವದು. ಆದುದರಿಂದ ಎಂತ
ಹ ಸಣ್ಣ ವಿಷಯವಾದರೂ ಅದನ್ನು ಸರಿಯಾದ ರೀತಿಯಲ್ಲಿ ತಿ
ಳಿಯ ಪಡಿಸಿದರೆ ಅದಕ್ಕೆ ಒಳ್ಳೇ ಗೌರವವುಂಟಾಗುತ್ತದೆ
ಒಂದು ವೇಳೆ ಎಂತಹ ಗಹನವಾದ ವಿಷಯವೂ ಕೂಡ ಅದು ಸ
ರಿಯಾದ ರೀತಿಯಲ್ಲಿರದೆ ಹೋದರೆ ಅದಕ್ಕೆ ಗೌರವವುಂಟಾಗ
ಲಾರದು. ಕಾರಣ ಶೈಲಿಯು ಶ್ಲಾಘ್ಯವೆನಿಸಿಕೊಳ್ಳಬೇಕಾದರೆ
ಎಲ್ಲರೂ ಕೆಲವು ನಿಯಮಗಳನ್ನು ಅವಶ್ಯವಾಗಿ ಅರಿತುಕೊಳ್ಳ
ಬೇಕಾಗುವದು.

ಗದ್ಯವು ಸ್ವಾರಸ್ಯಪೂರ್ಣವಾದ ಶೈಲಿಯಲ್ಲಿದ್ದರೆ ಅದು ಗ
ದ್ಯದ ಶೈಲಿಯಾಗಿದ್ದರೂ ಕೂಡ ಪದ್ಯಕ್ಕಿಂತ ಮಹತ್ವವನ್ನು
ಹೊಂದುವದು. ಪದ್ಯವು ಗಣ, ಪ್ರಾಸಗಳನ್ನು ಹೊಂದಿದರೂ
ಕೂಡ ಭಾವಬೋಧಾತ್ಮಕವಾಗಿರದೆ ಹೋದರೆ ಅದು ಪದ್ಯವೇ
ಅಲ್ಲ. ಗುಣವಿವೇಚನಕ್ಕಾಗಿ ಪ್ರಾಮುಖ್ಯವಾಗಿ ಶಬ್ದವಿಚಾರ,
ವಾಕ್ಯವಿಚಾರ, ಅರ್ಥವಿಚಾರಗಳ ಮರ್ಮವನ್ನು ಅರಿಯ
ಬೇಕಾ

ಶುದ್ಧವಾಗಿರ
ಬೇಕು. ಲ್ಲಿ ಯಾರಿಗೂ

ಪ್ರೀತಿಯುಂಟಾಗಲಾರದು. ಹೀಗಿರುವದರಿಂದ ಸಾಧ್ಯವಾದ ಮಟ್ಟಿಗೂ ನಾವು ದೋಷಗಳಿಗೆ ಅವಕಾಶ ಕೊಡದೆ ಭಾಷೆಯನ್ನು ಶುದ್ಧವಾಗಿಟ್ಟುಕೊಂಡೇ ವೃದ್ಧಿಪಡಿಸುವದಕ್ಕೆ ಯತ್ನ ಮಾಡುತ್ತಿರಬೇಕು. ಅನ್ಯದೇಶ, ಗ್ರಾಮ್ಯ ಪದಗಳನ್ನು ಬೆರಿಕೆ ಮಾಡಕೂಡದು. ಪರಭಾಷೆ ಶಬ್ದಗಳನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಕಡಿಮೆ ಮಾಡಬೇಕು. ಉದಾ:—ಸರಕಾರ, ಕೋರ್ಟ್, ಖಾನಾವಳಿ, ಸ್ಟೇಶನ, ಬಾಂಕ, ಮೋಟಾರ, ಕಾರ್ಡು, ಮೈಲು ಇತ್ಯಾದಿ.

ಕನ್ನಡ ಭಾಷೆಯಲ್ಲಿ ಸಂಸ್ಕೃತ ಶಬ್ದಗಳು ಸೇರಿಕೊಂಡಿರುತ್ತವೆ. ಉದಾ:—ಗುಣ, ರಾತ್ರಿ, ಸಂತೋಷ, ಕೋಪ, ಸ್ವರ್ಗ, ಇಂದ್ರ, ಕಮಲ, ಗೃಹ ಮುಂತಾದವು. ಇವಲ್ಲದೆ ಹಲವು ಸಂಸ್ಕೃತ ಶಬ್ದಗಳು ವಿಕಾರ ದೊಂದಿ ತದ್ಭವ ಶಬ್ದಗಳಾಗಿವೆ. ಉದಾ:—ಕಂಬ, ನಿದ್ದೆ, ಸಂಜೆ, ಸಾಲೆ, ಹಣ, ದಾಳಿಂಬ ಮಂಜುಳ ಮುಂತಾದವು.

ಅರ್ಥವು ಸುಲಭವಾಗಿ ಆಗಬೇಕಾದರೆ ಬರೀ ಹಳಗನ್ನಡವನ್ನೇ ಉಪಯೋಗಿಸಬಾರದು. ಕ್ಲಿಷ್ಟವಾದ ಸಂಸ್ಕೃತದ ಕಠಿಣ ಪದಗಳನ್ನು ಶಕ್ಯವಿದ್ದಷ್ಟು ಉಪಯೋಗಿಸಕೂಡದು. ಜನರಿಗೆ ಅರ್ಥವಾಗದೇ ಹೋದಲ್ಲಿ ರಚಿಸುವವರ ಪ್ರೌಢಿಮೆಯಿಂದ ಪ್ರಯೋಜನವೇನು? ಜನರಿಗೆ ಅರ್ಥವಾಗುವಂತೆ ಪದಗಳನ್ನು ಉಪಯೋಗಿಸಿದರೆ ಮಾತ್ರ ಆ ಪ್ರೌಢಿಮೆಗೆ ಪರಿಮಳವುಂಟಾಗುವದು. ಆದರೆ ಕೆಲವೆಡೆಯಲ್ಲಿ ಕ್ಲಿಷ್ಟವಾದ ಪದಗಳನ್ನು ಉಪಯೋಗಿಸಲೇ ಬೇಕಾಗುವದು. ಆದರೆ ರೂಢಿಯಲ್ಲಿರುವ ಕನ್ನಡ ಪದಗಳಿರುವಾಗ ಸಂಸ್ಕೃತ ಪದಗಳನ್ನೇ ಉದ್ದೇಶಪೂರ್ವಕವಾಗಿ

ತುಂಬಕೂಡದು. ಶೈಲಿಯು ಒಂದು ಭಾಗವು ಶಬ್ದದ ಅನೇಕಾರ್ಥಗಳನ್ನು, ವಿರುದ್ಧಾರ್ಥವುಳ್ಳ ಶಬ್ದಗಳನ್ನು ಮತ್ತು ಒಂದೇ ಅರ್ಥವುಳ್ಳ ಅನೇಕ ಶಬ್ದಗಳ ಪ್ರಯೋಗವನ್ನು ಅವಲಂಬಿಸಿರುತ್ತದೆ. ಉದಾ: —

ಅನೇಕ ಅರ್ಥದ ಶಬ್ದಗಳು.

ಶಬ್ದ.	ಅನೇಕ ಅರ್ಥ
ಏಳು	೧. ಏಳು (ಸಂಖ್ಯೆ) ವಿಶೇಷಣ.
	೨. ಏಳು (ಕ್ರಿಯಾಪದ)
ಹೊಳೆ	೧ ನದಿ.
	೨. ತೋಚು.
	೩. ಪ್ರಕಾಶಿಸು

ವಿರುದ್ಧಾರ್ಥಕ ಶಬ್ದಗಳು.

ಅರ್ಥ.	ವಿರುದ್ಧ ಅರ್ಥ
ಮಾನ	ಅಪಮಾನ
ಗೌರವ	ಅಗೌರವ (ತಿರಸ್ಕಾರ)
ಹಿಗ್ಗು	ತಗ್ಗು
ಉನ್ನತಿ	ಅವನತಿ

ಒಂದು ಅರ್ಥದ ಶಬ್ದಗಳು.

ಶಬ್ದಗಳ ಗುಂಪು	ಒಂದೇ ಶಬ್ದ.
ಕೆಟ್ಟ ಕೆಲಸ ಮಾಡಿದರೆ ಹೊಂದುವ ಸ್ಥಿತಿ	ದುರ್ಗತಿ, ನರಕ

ಕಮಲದಂತೆ ಮುಖವುಳ್ಳ ಸ್ತ್ರೀ — ಕಮಲಮುಖಿ

ನದಿಯನ್ನು ದಾಟುವುದಕ್ಕೆ ಯೋಚಿಸಿದ ಉಪಾಯ — ಸೇತುವೆ

ಒಂದೇ ಅರ್ಥದ ಅನೇಕ ಶಬ್ದಗಳು.

ಸೂರ್ಯ	ಭಾಸ್ಕರ, ರವಿ, ಚಂಡರಶ್ಮಿ, ಆದಿತ್ಯ, ಅಂಬೋಜಸಖ, ಬಿಸರುಹಪ್ರಿಯ, ನೇಸರು, ದಿನಪನು, ಇನ
ನೀರು	ಜಲ, ವಾರಿಧಿ, ಅಂಬು, ಪಯ, ಆಪ, ವನ, ಉದಕ
ಕಮಲ	ನೈದಿಲೆ, ಕುಮುದ, ಪದ್ಮ, ಸರಸಿಜ, ಅಂಬೋಜ, ಶತಪತ್ರ, ಪಂಕಜ, ಜಲಜ, ಪುಂಡರೀಕ, ರಾಜೀವ, ಅಂಬುಜ, ತಾವರೆ.

ಶಬ್ದಗಳಲ್ಲಿಯ ಅರ್ಥಭೇದಗಳು.

ಅ	ಪರಿತಾಪ	ಸಂಕಟಪಡು
	ಸಂತಾಪ	ತಳಮಳಗೊಳು
	ಪಶ್ಚಾತ್ತಾಪ	ತಪ್ಪುಮಾಡಿದ್ದಕ್ಕೆ ನೊಂದುಕೊಳ್ಳು
ಬ	ದುರ್ವ್ಯಯ	ಕೆಟ್ಟ ರೀತಿಯಿಂದ ಖರ್ಚು ಮಾಡು
	ಅಪವ್ಯಯ	ವ್ಯರ್ಥ ಕಳಕೊಳ್ಳು
	ಅತಿವ್ಯಯ	ಬಹಳ ಖರ್ಚು ಮಾಡು
	ಮಿತವ್ಯಯ	ನಿಯಮಿತದಿಂದ ಖರ್ಚು ಮಾಡು
ಕ	ದೇವ	ದೇವರು
	ದೈವ	ನಶೀಬ, ಹಣೆಬರಹ

	ದೆವ್ವ	ಭೂತ
ಡ	ಚಿತೆ	ಬೆಂಕಿ
	ಚಿಂತೆ	ಮನನೋವು

ಬೇರೊಂದು ಅರ್ಥದ ಶಬ್ದಗಳು

ಮುಕ್ಕಣ್ಣ	ಮೂರು ಕಂಣುಗಳುಳ್ಳವ (ಶಿವ)
ಹಣೆಗಣ್ಣ	ಹಣೆಯಲ್ಲಿ ಕಣ್ಣುಳ್ಳವ (ಶಿವ)
ಚಕ್ರಪಾಣಿ	ಪಾಣಿಯಲ್ಲಿ ಚಕ್ರವುಳ್ಳವ (ಕೃಷ್ಣ)
ಕಮಲಮುಖಿ	ಕಮಲದಂತೆ ಮುಖವುಳ್ಳವಳು (ಸೀತಾದೇವಿ)

ಅನ್ವರ್ಥ ಶಬ್ದಗಳು

ಪದಗಳು	ಅವುಗಳ ಸಂಬಂಧವನ್ನು ಸೂಚಿಸುವ ಪದಗಳು
ಸೈನ್ಯ	ಸೈನಿಕ
ಪಾಳಯ	ಪಾಳೆಗಾರ
ಶ್ರೀ	ಶ್ರೀಮಂತ
ಬುದ್ಧಿ	ಬುದ್ಧಿವಂತ

---

೩ ವಾಕ್ಯವಿಚಾರ

ಅರ್ಥಪೂರ್ಣವಾದ ಮಾತು ವಾಕ್ಯವೆನಿಸುವದು. ನಿತ್ಯವೂ ಒಂದೇ ಬಗೆಯ ಊಟದಿಂದ ಬೇಸರಿಕೆಯುಂಟಾಗಲು

ಅದನ್ನು ಹೋಗಲಾಡಿಸುವ ಬಗೆಗೆ ಜನರು ಊಟದಲ್ಲಿ ವ್ಯತ್ಯಾಸವನ್ನು ಕಲ್ಪಿಸಿಕೊಂಡು ಸುಖಿಸುವಂತೆ ವಾಕ್ಯಗಳಲ್ಲಿಯೂ ಅಂದವಾದ ರೀತಿಯಲ್ಲಿ ವ್ಯತ್ಯಾಸವನ್ನು ಕಲ್ಪಿಸಿಕೊಳ್ಳಬೇಕು. ಕೆಲವು ಸಂದರ್ಭಗಳಲ್ಲಿ ಮಾತುಗಳನ್ನು ಹೆಚ್ಚಿಸಿ ಅರ್ಥವನ್ನು ಸ್ಪಷ್ಟೀಕರಿಸಬೇಕು ಮತ್ತು ಕೆಲವು ಸಂದರ್ಭಗಳಲ್ಲಿ ಹೆಚ್ಚಿನ ಅರ್ಥವನ್ನು ಸಂಕ್ಷೇಪದಿಂದ ವಿವರಿಸುವ ಕ್ರಮವನ್ನು ಚನ್ನಾಗಿ ಅರಿತಿರಬೇಕು. ಕೆಲಕೆಲವೆಡೆಗಳಲ್ಲಿ ಹೇಳಿದುದನ್ನೇ ಹೇಳಬೇಕಾದರೆ ಏಕಾಭಿಪ್ರಾಯವನ್ನು ಪರ್ಯಾಯ ವಾಕ್ಯಭೇದದಿಂದ ತಿಳಿಸುವ ಪದ್ಧತಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕು.

ವಾಕ್ಯ ವಿಭಜನೆ

ವಾಕ್ಯಭೇದವನ್ನರಿಯಲು ವಾಕ್ಯವಿಭಜನಾಕ್ರಮವು ಮೊದಲು ಬೇಕಲ್ಲು. ವಾಕ್ಯದಲ್ಲಿರುವ ಪದಗಳನ್ನು ವಾಕ್ಯಭಾಗಗಳನ್ನು ಬಿಂಗಡಿಸುವದು ವಾಕ್ಯ ವಿಭಜನೆಯೆನಿಸುವದು. ವಾಕ್ಯಗಳಲ್ಲಿ ಸ್ವತಂತ್ರ ವಾಕ್ಯ, ಸಾಮಾನ್ಯ ವಾಕ್ಯ, ಮಿಶ್ರ ವಾಕ್ಯ, ಸಂಯೋಜಿತ ವಾಕ್ಯವೆಂದೂ ವಿಧವುಂಟು.

ಹಿಂದು ಮುಂದಿನ ವಾಕ್ಯಗಳ ಸಂಬಂಧವಿಲ್ಲದೆ ಪೂರ್ಣ ವಿಚಾರವನ್ನು ಹೇಳುವ ವಾಕ್ಯವು ಸ್ವತಂತ್ರ ವಾಕ್ಯವು.

ಒಂದೇ ಕ್ರಿಯಾಪದವುಳ್ಳ ಸ್ವತಂತ್ರ ವಾಕ್ಯವು ಸಾಮಾನ್ಯ ವಾಕ್ಯವು.

ಉದಾ:— ರಾಮನು ರಾವಣನನ್ನು ಕೊಂದನು.

ವಾಕ್ಯಗಳನ್ನೇ ಅಂಗವಾಗಿ ಹೊಂದಿರುವ ವಾಕ್ಯವು ಮಿಶ್ರವಾಕ್ಯವು.

ಉದಾ:— ಓದದಿದ್ದರೆ ವಿದ್ಯೆ ಬರುವದಿಲ್ಲವೆಂದು ಸರ್ವರೂ ತಿಳಿದಿದ್ದಾರೆ.

ಈ ವಾಕ್ಯದಲ್ಲಿ ಓದದಿದ್ದರೆ ವಿದ್ಯೆ ಬರುವದಿಲ್ಲವೆಂಬ ಲಿಂಗ ವಾಕ್ಯವು, ಸರ್ವರೂ ತಿಳಿದಿದ್ದಾರೆ ಎಂಬ ಪ್ರಧಾನ ವಾಕ್ಯಕ್ಕೆ ಕರ್ಮಸ್ಥಾನದಲ್ಲಿ ಇರುತ್ತದೆ

ಎರಡು ಇಲ್ಲವೆ ಹೆಚ್ಚಾದ ಸ್ವತಂತ್ರ ವಾಕ್ಯಗಳು, ಮತ್ತು ಮೊದಲಾದ ಅವ್ಯಯಗಳಿಂದ ಸೇರಿಸಲ್ಪಟ್ಟಿದ್ದರೆ ಅದು ಸಂಯೋಜಿತ ವಾಕ್ಯವೆನಿಸುವದು

ಉದಾ:— ವಿದ್ಯಾರಣ್ಯರು ಮೃತ್ಯುಲೋಕದಲ್ಲಿ ಜನ್ಮವೆತ್ತಿದರು ಮತ್ತು ಮಾನವ ಜನ್ಮದ ಸಾರ್ಥಕತೆಯನ್ನು ಮಾಡಿಕೊಂಡರು.

ಇದರಲ್ಲಿ ಎರಡು ಸ್ವತಂತ್ರವಾಕ್ಯಗಳು ಕೂಡಿ ಸಂಯೋಜಿತ ವಾಕ್ಯವಾಗಿರುತ್ತದೆ.

(೧) ವಿದ್ಯಾರಣ್ಯರು ಮೃತ್ಯುಲೋಕದಲ್ಲಿ ಜನ್ಮವೆತ್ತಿದರು.

(೨) ಅವರು ಮಾನವ ಜನ್ಮದ ಸಾರ್ಥಕತೆಯನ್ನು ಮಾಡಿಕೊಂಡರು.

ವಾಕ್ಯ ಸಂಯೋಗ

ವಾಕ್ಯಗಳ ಸಂಯೋಗಕ್ಕೆ ಸಮುಚ್ಚಾಯಕಾವ್ಯಯಗಳು ಅವಶ್ಯಕವಾದವುಗಳು. ಉದಾ:— ಮತ್ತು, ಅಲ್ಲದೆ, ಇದಲ್ಲದೆ, ಬಳಿಕ, ಕೂಡಲೆ, ಹಾಗು, ಇನ್ನು ಇತ್ಯಾದಿ.

ಕಾರಣಾರ್ಥಗಳೂ ವಾಕ್ಯಗಳನ್ನು ಒಂದುಗೂಡಿಸುತ್ತವೆ.

ಉದಾ:— ಅದರಿಂದ, ಇದರಿಂದ, ಆದುದರಿಂದ, ಆದಕಾರಣ, ಏಕೆಂದರೆ ಮುಂತಾದವು.

ಎರಡು ವಿರುದ್ಧ ಅರ್ಥಗಳುಳ್ಳ ವಾಕ್ಯಗಳನ್ನು ವಿರುದ್ಧಾರ್ಥಕಗಳು ಕೂಡಿಸುತ್ತವೆ. ಉದಾ:— ಆದರೆ, ಆದರೂ, ಇದ್ದರೂ ಮುಂತಾದವುಗಳು.

ಕೆಲವೆಡೆ ವಿಕಲ್ಪಾರ್ಥಗಳು ಅಲ್ಲಲ್ಲಿ ಕಂಡುಬರುತ್ತವೆ. ಉದಾ:—ಇಲ್ಲವೆ, ಅಲ್ಲವೆ, ಅಥವಾ ಮುಂತಾದವುಗಳು.

ಒಂದು ವಾಕ್ಯವಾಗಲಿ ಅಥವಾ ಪದವಾಗಲಿ ಇನ್ನೊಂದು ವಾಕ್ಯದ ಅಥವಾ ಪದದ ವಿವರಣೆಯನ್ನು ಮಾಡುತ್ತಿದ್ದರೆ ನಡುವೆ ವಿವರಣಾರ್ಥಕಗಳು ಬರುತ್ತವೆ. ಉದಾ:— ಹೇಗಂದರೆ, ಎಂತೆಂದರೆ, ಏನಂದರೆ ಮುಂತಾದವುಗಳು.

ಉದಾಹರಣೆಗಳು.

೧ ಸಮುಚ್ಚಯಕ್ಕೆ:—ಪ್ರೀತಿಯಿಂದಲೂ ಭಕ್ತಿಯಿಂದಲೂ ದೇವರನ್ನು ಭಜಿಸು; ಇದರಿಂದ ನಿನಗೆ ಸಂಪತ್ತು ಹಾಗೂ ಸುಖವು ದೊರಕುವದು.

೨ ಕಾರಣಕ್ಕೆ:—ರಾವಣನು ಸೀತೆಯನ್ನು ಕದ್ದೊಯ್ದನು. ಆದರಿಂದ ರಾಮನು ರಾವಣನನ್ನು ಸಂಹರಿಸಿದನು.

೩ ವಿರೋಧಕ್ಕೆ:—ನೀನು ಹೋಡುವದಕ್ಕೆ ನನಗೆ ಅಡ್ಡಿ ಎಳ್ಳಷ್ಟೂ ಇಲ್ಲ; ಆದರೆ ನೀನು ಅಲ್ಲಿಯ ಪಟ್ಟಿಗೆ ಹೋಗದಿರು

೪ ವಿಕಲ್ಪಕ್ಕೆ (ಗೌಣಾರ್ಥಕ) :— ಹರನಾಗಲಿ ಅಥವಾ ಹರಿಯಾಗಲಿ ನಿನಗೆ ಭೇದವೆಲ್ಲಿಂದ ಬರಬೇಕು.

೫ ವಿವರಣಾರ್ಥಕ್ಕೆ:— ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು.

ಹೇಗಂದರೆ ಕುಳಿತು ಉಣ್ಣುವವನು ಹೊಸ ದುಡ್ಡನ್ನು

ಗಳಿಸದಿರುವದರಿಂದ ಇದ್ದ ದುಡ್ಡೆಲ್ಲ ಹೊಟ್ಟೆಗೆ ಹೋಗುವದು.

ಕೆಳಗೆ ಮಾದರಿಗಾಗಿ ಕೆಲವು ವಾಕ್ಯ ಸಮೂಹಗಳನ್ನು ಸಂಯೋಗ ಮಾಡಿ ಬರೆದು ತೋರಿಸಿದೆ.

ಬೇರೆ ಬೇರೆ ವಾಕ್ಯಗಳು	ಸಂಯೋಗ ವಾಕ್ಯಗಳು
೧ ಅವನು ನನ್ನ ಮನೆಗೆ ಬಂದನು. ನಾನು ಮನೆಯಲ್ಲಿದ್ದಿಲ್ಲ.	೧ ಅವನು ಬಂದಾಗ ನಾನು ಮನೆಯಲ್ಲಿದ್ದಿಲ್ಲ.
೨ ಒಂಭತ್ತು ಹೊಡೆಯಿತು. ನಾನು ನನ್ನ ಕೆಲಸ ಆರಂಭಿಸಿದೆನು	೨ ಒಂಭತ್ತು ಹೊಡೆದ ಕೂಡಲೆ ನಾನು ನನ್ನ ಕೆಲಸವನ್ನು ಆರಂಭಿಸಿದೆನು.
೩ ಹನುಮಂತರಾಯರು ಬೆಳಗಾಂವಿಯನ್ನು ಬಿಟ್ಟರು. ಆ ಹೊತ್ತಿನಿಂದ ಅವರು ಸುಖವಾಗಿದ್ದಾರೆ.	೩ ಹನುಮಂತರಾಯರು ಬೆಳಗಾಂವಿಯನ್ನು ಬಿಟ್ಟಂದಿನಿಂದ ಸುಖವಾಗಿದ್ದಾರೆ
೪ ನಾನು ಬಹಳ ಹೊತ್ತು ಹಾದೀ ನೋಡಿದೆನು. ನಾನು ಬೇಸತ್ತೆನು.	೪ ನಾನು ಹಾದೀ ನೋಡಿ ಬೇಸತ್ತೆನು.
೫ ಹರಿಯು ಜಾಣ ಹುಡುಗನು. ಅವನು ಅವಿಶ್ವಾಸಕನು.	೫ ಹರಿಯು ಜಾಣನಾದರೂ ವಿಶ್ವಾಸಕ್ಕೆ ತಕ್ಕವನಲ್ಲ.
೬ ಶಿಕಂದರನು ಹಿಂದುಕುಶ ಪರ್ವತವನ್ನು ದಾಟಿದನು ಆಟಕದ ದಾರಿಯಿಂದ	೬ ಶಿಕಂದರನು ಹಿಂದೂಕುಶ ಪರ್ವತವನ್ನು ದಾಟಿ ಆಟಕದ ದಾರಿಯಿಂದ

ಪಂಜಾಬದ ಮೇಲೆ ದಂಡೆತ್ತಿ ಬಂದನು. ಅಲ್ಲಿದ್ದ ಹಲವರು ಅರಸರು ಪರಸ್ಪರ ದ್ವೇಷಬುದ್ಧಿಯವರಾಗಿದ್ದರು. ಅವರು ಒಟ್ಟುಗೂಡಲಿಲ್ಲ. ಅವರು ಅವನಿಗೆ ಶರಣುಬಂದರು.

ಪಂಜಾಬದ ಮೇಲೆ ದಂಡೆತ್ತಿ ಬಂದಾಗ ಅಲ್ಲಿದ್ದ ಅರಸರು ಪರಸ್ಪರ ದ್ವೇಷಬುದ್ಧಿಯಿಂದ ಒಟ್ಟುಗೂಡದೆ ಅವನಿಗೆ ಶರಣು ಬಂದರು.

ವಾಕ್ಯಪರಿವರ್ತನೆ.

ಒಂದರ್ಥದ ವಾಕ್ಯವನ್ನು ಅರ್ಥವ್ಯತ್ಯಾಸವಾಗದಂತೆ ಮತ್ತೊಂದು ಬಗೆಯ ವಾಕ್ಯವನ್ನಾಗಿ ಮಾರ್ಪಡಿಸಬಹುದು. ಇಲ್ಲಿ ಕೆಲವು ಉದಾಹರಣೆಗಳಿಂದ ಮಾರ್ಗವನ್ನು ಸೂಚಿಸುವೆವು

ಉದಾಹರಣೆಗಳು

೧ ಸಂಭವಾರ್ಥ;—ಜ್ಞಾನವಿದ್ದವನಿಗೆ ಸುಖವುಂಟು.
ನಿಷೇಧ:—ಜ್ಞಾನವಿದ್ದವನಿಗೆ ಸುಖವಿಲ್ಲದೆ ಇಲ್ಲ.
೨ ನಿಶ್ಚಿತಾರ್ಥ:—ಇದು ರಾಮನ ಕೆಲಸವಾಗಿದೆ.
ಪ್ರಶ್ನಾರ್ಥಕ:—ಇದು ರಾಮನ ಕೆಲಸವಲ್ಲವೇನು?
೩ ಪ್ರಶ್ನಾರ್ಥಕ:—ಅವನು ಬಹಳೇ ಜಾಣನಲ್ಲವೆ?
ಭಾವಬೋಧಕ:—ಅವನು ಎಂತಹ ಜಾಣ!
೪ ನಿಶ್ಚಯಾರ್ಥ:—ಅವನು ಬಹಳ ಶೂರನು.
ಭಾವಬೋಧಕ:—ಅವನು ಎಷ್ಟು ಶೂರನು!
ಪ್ರಶ್ನಾರ್ಥಕ:—ಅವನು ಬಹಳ ಶೂರನಲ್ಲವೇ?
೫ ನಿಶ್ಚಯಾರ್ಥ:—ಸತ್ಯಕ್ಕೆ ಜಯವಾಗಲೆಂದು ಇಚ್ಛಿಸುವೆವು.
ವಿಧ್ಯರ್ಥ:—ಸತ್ಯಕ್ಕೆ ಜಯವಾಗಲಿ.

೬ ಕರ್ತರಿ ಪ್ರಯೋಗ:— ಲಕ್ಷ್ಮೀಶನು ಜೈಮಿನಿಭಾರತವನ್ನು ರಚಿಸಿದನು.

ಕರ್ಮಣಿ ಪ್ರಯೋಗ:—ಲಕ್ಷ್ಮೀಶನಿಂದ ಜೈಮಿನಿಭಾರತವು ರಚಿಸಲ್ಪಟ್ಟಿತು.

೭ ಸಂಕ್ಷಿಪ್ತ ಕರ್ಮಣಿ ಪ್ರಯೋಗ: —ಪುಸ್ತಕವು ತಂದಿದೆ, ದೇವರ ಪೂಜೆ ಮಾಡಿದೆ.

೮ ಸಾಮಾನ್ಯ ವಾಕ್ಯ:—ಮರಾಟರ ಅಪಜಯದ ರೀತಿಯನ್ನು ಹೇಳು.

ಮಿಶ್ರವಾಕ್ಯ:—ಮರಾಟರು ಹೇಗೆ ಅಪಜಯ ಪಟ್ಟರೆಂಬದನ್ನು ಹೇಳು.

೯ ಸಾ. ವಾಕ್ಯ:—ಜನರ ಹಲವು ಉದ್ಯೋಗಗಳಿಂದಲೂ ಈಗ ಅವರ ಉಪಜೀವನ ಸಾಗಲಾರದು.

ಸಂಯೋಜಿತ ವಾಕ್ಯ:—ಜನರು ಈಗ ಹಲವು ಬಗೆಯ ಉದ್ಯೋಗ ಮಾಡುತ್ತಾರೆ. ಆದರೂ ಅವರ ಉಪಜೀವನವು ಸಾಗಲಾರದು.

೧೦ ಮಿಶ್ರ ವಾಕ್ಯ:— ರಾಮನು ಜಾಣನೆಂಬದನ್ನು ನಾನು ಬಲ್ಲೆನು.

ಸಂಯೋಜಿತ ವಾಕ್ಯ:— ರಾಮನು ಜಾಣನು; ಅವನ್ನು ನಾನು ಬಲ್ಲೆನು.

ವಾಕ್ಯವೈಶಿಷ್ಟ್ಯ.

೧ ಉಳ್ಳ (ಇರು) ಧಾತುವಿನ ಪ್ರ. ಪು. ನ. ಲಿಂಗದ ಏಕವಚನದ ಉಂಟು ಎಂಬ ರೂಪವು ಬಳಿಕೆಯಲ್ಲಿ ಇರುತ್ತದೆ. ಅದು ವರ್ತಮಾನ ಭೂತ ಕಾಲಗಳಲ್ಲಿ ಎಲ್ಲ ಲಿಂಗಗಳಲ್ಲಿ ಎಲ್ಲ

ವಚನಗಳಲ್ಲಿ ಉಪಯೋಗಿಸಲ್ಪಡುತ್ತದೆ.

ಉದಾ:—ಅಂಗಡಿಯು ಉಂಟು.
ಅಂಗಡಿಗಳು ಉಂಟು.
ಮನುಷ್ಯನು ಉಂಟು.
ಮನುಷ್ಯರು ಉಂಟು.

೨ ಹಲವು ಕರ್ತೃ ಪದಗಳು ಒಂದೇ ವಾಕ್ಯದಲ್ಲಿ ಬಂದರೆ ಅವು ಬೇರೆ ಬೇರೆ ಲಿಂಗದವು ಇದ್ದರೂ ಕೂಡ ಕ್ರಿಯಾಪದಕ್ಕೆ ಕೊನೆಯ ಕರ್ತೃಪದದ ಲಿಂಗವು ಬರುವದು.

ಉದಾ:— ಅರಸನೂ ರಾಣಿಯೂ ರಥವೂ ಬಂದವು.
ರಥವೂ ಅರಸನೂ ರಾಣಿಯೂ ಬಂದರು.

೩ ಉತ್ತರ ವಿಶೇಷಣಕ್ಕೆ ವಿಶೇಷ್ಯದ ಲಿಂಗವಚನಗಳನ್ನು ವಿಶೇಷಣವು ಹೊಂದುವದೆಂಬ ನಿರ್ಬಂಧವಿಲ್ಲ.

ಉದಾ: – ವಿದ್ವಾಂಸರು ದೇಶಕ್ಕೆ ಭೂಷಣವು.

೪ ಬಹುವಚನದ ವಿಭಕ್ತಿ ಪ್ರತ್ಯಯಗಳು ಲೋಪ ಹೊಂದಿದ ಪದಗಳಿಗೆ ಬಹುವಚನದ ಅರ್ಥವಿರುತ್ತದೆ. ಕಾರಣ ಅವುಗಳಿಗೆ ಬಹುವಚನದ ಆಖ್ಯಾತ ಬರುವದು.

ಉದಾ:—ಕುದುರೆಯು ಬಂದವು.
ಮುಳ್ಳು ಚುಚ್ಚಿದವು.

ಅರ್ಥ:— ಮುಳ್ಳುಗಳು ಚುಚ್ಚಿದವು.

೫ ತಿರಸ್ಕಾರಾರ್ಥದಲ್ಲಿ ಪುಲ್ಲಿಂಗದ ಇಲ್ಲವೆ ಸ್ತ್ರೀಲಿಂಗದ ಆಖ್ಯೆಯಗಳಿಗೆ ನಪುಂಸಕಲಿಂಗ ಬರುತ್ತದೆ.

ಉದಾ:—ನಿನ್ನ ಗಂಡ ಏನು ಮಾಡುತ್ತದೆ.

೬ ಒಂದೇ ವಾಕ್ಯದಲ್ಲಿ ಹಲವು ಆಖ್ಯೆಯಗಳಿದ್ದರೆ

ಆಖ್ಯಾತವು ಬಹುವಚನಾಂತವಾಗುತ್ತದೆ.

ಉದಾ:—ರಾಮನು ಕೃಷ್ಣನು ಮತ್ತು ಗೋವಿಂದನು ಬಂದರು.

೭ ಸನ್ಮಾನಾರ್ಥ ಮತ್ತು ಹಾಸ್ಯಾರ್ಥಗಳಲ್ಲಿ ಏಕವಚನಕ್ಕೆ ಬಹುವಚನವು ಬರುವದು.

ಉದಾ:—ಲಾರ್ಡ ರೀಡಿಂಗರು ಹಿಂದುಸ್ಥಾನದ ವ್ಹಾಯಿಸರಾಯರಿದ್ದರು.

ಓಹೋ; ನೀವು ಬಂದಿರಾ ?

೮ ಕೆಲವೆಡೆಯಲ್ಲಿ ವಿಭಕ್ತಿಗಳ ವಿಪರಿಣಾಮವಾಗುತ್ತದೆ.

ಉದಾ:—ಒಂದು ವರ್ಷ ಅಭ್ಯಾಸ ಮಾಡಿದನು.

(ಒಂದು ವರ್ಷದಲ್ಲಿ ಅಭ್ಯಾಸ ಮಾಡಿದನು. ಇಲ್ಲಿ ಸಪ್ತಮಿಗೆ ಪ್ರಥಮೆಯು ಬಂದಿದೆ.

೯ ಕಿವಿಯಲ್ಲಿ ಕೇಳಿದೆವು. (ಕಿವಿಯಿಂದ ಕೇಳಿದೆವು.) ಕೈಯಿಂದ ಮಾಡಿದ ವಸ್ತುವು.

ಇಲ್ಲಿ ತೃತೀಯಗೆ ಸಪ್ತಮಿಯು ಬಂದಿರುತ್ತದೆ.

೧೦ ಸುಳ್ಳಿಗೆ ನಾಚಿದನು. (ಸುಳ್ಳಿನಿಂದ ನಾಚಿದನು.)

ಬೆಳಗಾಂವಿಗೆ ಕೊಲ್ಹಾಪುರವು ಎಪ್ಪತ್ತು ಮೈಲು.

ಇಲ್ಲಿ ಪಂಚಮಿಗೆ ಬದಲಾಗಿ ಚತುರ್ಥಿ ಬಂದಿರುತ್ತದೆ.

೧೧ ನನ್ನ ಹಳ್ಳಿಯ ಮರೆಯಲು ನನಗಾಗುವದಿಲ್ಲ.

ಇಲ್ಲಿ ದ್ವಿತೀಯಗೆ ಷಷ್ಠಿ ಬರುವದು.

೧೨ ಜಂಗಡಿ ಉತ್ಸವವನ್ನು ನೋಡುವದಕ್ಕೆ ಊರಿಗೆ ಊರೇ ಬಂದಿತ್ತು.

(ಇಲ್ಲಿ ಊರು ಹೋಗುವದು ಅಶಕ್ಯ. ಊರಲ್ಲಿರುವ

ಜನರು ಎಂಬ ವಾಚ್ಯಾರ್ಥ.)

೧೩ ಕಣ್ಣಲ್ಲಿ ಬೆಂಕಿಯನ್ನು ಸುರಿಸುತ್ತ ಗರ್ಜಿಸಿದನು.

(ಕಣ್ಣಿನಲ್ಲಿ ಬೆಂಕಿಯನ್ನು ಸುರಿಸುತ್ತ ಗರ್ಜಿಸುವದು ಅಶಕ್ಯ. ಕೆಂಪಾದ ಕಣ್ಣಿನಿಂದ ಸಿಟ್ಟನ್ನು ತೋರಿಸುತ್ತ ಜೋರಿನಿಂದ ಒದರಿದನು ಎಂಬರ್ಥ.)

ವಾಕ್ಯ ಶುದ್ಧತೆ.

ವಾಕ್ಯಶುದ್ಧತೆಗೆ ಶಬ್ದಶುದ್ಧತೆಯು ಬೇಡು. ಅದಲ್ಲದೆ ಆ ಶಬ್ದಗಳು ಯೋಗ್ಯಸ್ಥಾನದಲ್ಲಿ ಇರಬೇಕಾಗುತ್ತದೆ. ಕರ್ತೃ ಕರ್ಮ ಕ್ರಿಯಾಪದಗಳು ಅವುಗಳಿಗೆ ಸಂಬಂಧಪಟ್ಟ ಪದಗಳು ಅನುಕ್ರಮವಾಗಿ ಬರಬೇಕು. ವಾಕ್ಯದಲ್ಲಿ ಕಾಲ ಪುರುಷ ಲಿಂಗ ವಚನ ವಿಭಕ್ತಿಗಳು ಕ್ರಿಯಾಪದಕ್ಕೆ ಅನುಸರಿಸಿ ಇರಬೇಕು. ವ್ಯಾಕರಣಕ್ಕೆ ವಿರುದ್ಧವಾದ ಶಬ್ದಗಳನ್ನು ಉಪಯೋಗಿಸ ಕೂಡದು.

ಅರ್ಥಭೇದ.

೧ ಪರೀಕ್ಷೆಗೆ ಕುಳಿತವನು ಕಲ್ಲನೇ;
ಪರೀಕ್ಷೆಗೆ ಕುಳಿತವನೇ ಕಲ್ಲನು.

೨ ರಾತ್ರಿಯಲ್ಲಿ ತೊಳಲಿದನು.
ರಾತ್ರಿಯನ್ನು ತೊಳಲಿದನು.

೩ ಎಲ್ಲ ವಿದ್ಯೆಗಳನ್ನು ಬಲ್ಲಿದನು.
ಎಲ್ಲ ವಿದ್ಯೆಗಳ ತವರೂರು.

೪ ಆತನು ಬಡವರಿಗೆ ಕಾಮಧೇನು.
ಆತನು ಬಡವರಿಗೆ ಕಾಮಧೇನುವಿನಂತೆ.

೫ ಕಲ್ಲನೂ ಬಂದನು; ಕಲ್ಲನೇ ಬಂದನು.

೬ ನಾನು ಯಮನು; ನಾನೇ ಯಮನು.
೭ ಸತ್ತರೆ ಸುಖ; ಸತ್ತರೇ ಸುಖ.
೮ ಚಿಕ್ಕ ಮಕ್ಕಳು ಧರ್ಮ ಇಕ್ಕುವರು.
ಚಿಕ್ಕಮಕ್ಕಳೇ ಧರ್ಮ ಇಕ್ಕುವರು.

ವಾಕ್ಯದೋಷಗಳು.

ಕಿವಿಗೆ ಬಿರುಸಾಗುವಂತೆ ಸಂಧಿ ಮಾಡುವದು, ಅರ್ಥ ತಿಳಿಸುವದಕ್ಕೆ ಸಾಕಾಗುವಷ್ಟು ಪದ ಉಪಯೋಗಿಸದೆ ಇರುವದು, ಹೆಚ್ಚು ಪದಗಳನ್ನು ಉಪಯೋಗಿಸುವದು, ವಿಶೇಷ ಪ್ರಯೋಜನವಿಲ್ಲದೆ ಒಂದೇ ಅರ್ಥವುಳ್ಳ ಅನೇಕ ಪದಗಳನ್ನು ಉಪಯೋಗಿಸುವದು. ಮೊದಲು ಅಲಂಕಾರವು ಉತ್ಕೃಷ್ಟವಾಗಿದ್ದು ಅನಂತರ ಒರಒರುತ್ತ ಕೀಳಾಗುವದು, ಪದಗಳನ್ನು ಸರಿಯಾದ ಸ್ಥಾನದಲ್ಲಿ ಉಪಯೋಗಿಸದೆ ಇರುವದು, ಒಂದರ ಪದಗಳು ಮತ್ತೊಂದರೊಡನೆ ಬೆರೆತು ಅರ್ಥ ಮಾಡುವದಕ್ಕೆ ಕಷ್ಟ ಮಾಡುವದು, ಕ್ರಮ ತಪ್ಪಿರುವದು, ಲೋಕ ಪ್ರಸಿದ್ಧಿಗೆ ವಿರುದ್ಧವಾದದ್ದು, ಇವು ವಾಕ್ಯ ದೋಷಗಳು.

---

೪ ಅರ್ಥವಿಚಾರ.

ಕೊಟ್ಟ ವಾಕ್ಯಗಳ ಅರ್ಥವನ್ನು ಕುರಿತು ಅವುಗಳ ಭಾವವು ಸ್ಪಷ್ಟವಾಗುವಂತೆ ಮಾತಿನಲ್ಲಿ ಭಾವಾರ್ಥ ಬರೆಯುವದೂ, ಅವುಗಳ ಸರಳಾನುವಾದವನ್ನು ಬರೆಯುವದೂ, ಅವುಗಳ ಸಾರಾಂಶವನ್ನು ಬರೆಯುವದೂ ಒಂದರೆ, ಕೊಟ್ಟ ವಾಕ್ಯ ಸಮುದಾಯದ ಅರ್ಥವನ್ನು ಅರಿತಂತಾಗುವದು ಮೊದಲು ವಾಕ್ಯಗಳ ಗುಂಪುಗಳನ್ನು ಚನ್ನಾಗಿ ಅರ್ಥ ತಿಳಿಯುವ

ತನಕ ಓದಬೇಕು. ವಾಕ್ಯಗಳೊಳಗಿನ ಪ್ರತಿಯೊಂದು ಶಬ್ದದ ಅರ್ಥವನ್ನು ವಾಕ್ಯರಚನಾಕ್ರಮವನ್ನು ತಿಳಿದುಕೊಳ್ಳಬೇಕು. ವಾಕ್ಯಗಳಲ್ಲಿ ಹೇಳಿದ ಬೇರೆ ಬೇರೆ ಸಂಗತಿಗಳನ್ನು ನೆನಪಿಡಬೇಕು. ಕೊಟ್ಟ ವಾಕ್ಯಗಳ ಸಮುದಾಯವು ಯಾವ ಸಂಗತಿಗಳಿಂದ ಯಾವ ವಿಚಾರಗಳಿಂದ ಆಡಕವಾಗಿರುತ್ತದೆಂಬದನ್ನು (ಕವಿಯು) ಬರೆದವನು ಎಂಥ ಮಾತುಗಳಿಂದ ವಿವರಿಸುವನೆಂಬುದನ್ನು ಚನ್ನಾಗಿ ಪರಿಶೀಲಿಸಬೇಕು.

ಅ. ಸಾರಾಂಶ ಬರೆಹ.

ಕೊಟ್ಟ ವಾಕ್ಯ ಸಮುದಾಯಗಳಲ್ಲಿಯ ಮುಖ್ಯ ಸಂಗತಿಗಳನ್ನು ಬರೆಯುವದೇ ಸಾರಾಂಶ ಬರೆಹವು. ಸಾರಾಂಶ ಬರೆಹದಲ್ಲಿ ಕೊಟ್ಟ ಭಾಗದಲ್ಲಿಯ ಮುಖ್ಯ ಸಂಗತಿಗಳನ್ನು ಸ್ವಲ್ಪದರಲ್ಲಿ ಇದ್ದಕ್ಕಿದ್ದ ಹಾಗೆ ಬರೆಯಬೇಕು. ದ್ವಿರುಕ್ತಿಗಳನ್ನು ಶಕ್ಯವಿದ್ದಷ್ಟು ಬಿಡಬೇಕು. ಮುಖ್ಯ ಸಂಗತಿಗಳನ್ನು ಸುಲಭವಾದ ಶೈಲಿಯಲ್ಲಿ ಬರೆಯಬೇಕು. ಸಾರಾಂಶ ಬರೆಹವು ಮೂಲಭಾಗದ ಸುಮಾರು ಒಂದು ಮೂರನೇಯಾಂಶದಷ್ಟು ಆಗಬೇಕು. ಮುಖ್ಯ ಸಂಗತಿಗಳು ಒಂದಕ್ಕೊಂದು ಅಸಂಗತವಾಗಿದ್ದರೆ ಯೋಗ್ಯ ಶಬ್ದಗಳಿಂದ ಅರ್ಥವಾಗುವಂತೆ ಅವನ್ನು ಜೋಂದಿಸಬೇಕು.

ಉದಾ:—ಕರ್ನಾಟಕದ ಏಕೀಕರಣದ ವಿಷಯದಲ್ಲಿ ಜನತೆಯು ಎಷ್ಟು ಆತುರವಾಗಿರುವದೆಂಬದನ್ನು ನಾವೆಲ್ಲರೂ ಬಲ್ಲೆವು. ನೂರು ಜನರಿರುವ ಚಿಕ್ಕ ಹಳ್ಳಿಗೆ ಹೋದರೂ ಅಲ್ಲಿ ಈ ಮಾತು ಕೇಳಬರುವದು. ಜನಸಂಖ್ಯೆ ವಿಸ್ತಾರ ಪ್ರಾಕೃತಿಕ ಅನುಕೂಲ್ಯಗಳು, ಆದಾಯ ವೆಚ್ಚಗಳು, ಇತಿಹಾಸ ಸಾಹಿತ್ಯ, ಸಂಸ್ಕೃತಿ ಈ ಎಲ್ಲ ವಿಷಯಗಳು ನಮ್ಮ ಏಕೀಕರಣಕ್ಕೆ ತುಂಬ

ಅನುಕೂಲವಾಗಿವೆ. ಮನುಷ್ಯ ಯತ್ನದಿಂದಲೂ, ದೈವ ಸಂಕಲ್ಪದಿಂದಲೂ, ನಮ್ಮ ಕರ್ನಾಟಕದ ಭಾಗಗಳೆಲ್ಲ ಒಂದಾಗಿ ಒಂದು ಕರ್ನಾಟಕ ಪ್ರಾಂತವಾಯಿತೆಂದು ಕಲ್ಪಿಸುವಾ. ಇಷ್ಟರಿಂದಲೇ ನಮ್ಮ ಕಾರ್ಯವು ಮುಗಿದಂತಾಗುವದಿಲ್ಲ. ನಾವೆಲ್ಲರೂ ಭಾರತ ಮಾತೆಯ ಮಕ್ಕಳು. ಬಡತನವು ಕಣ್ಣು ಮುಂದೆ ಕಟ್ಟಿದ ಕಠಿಣವಾದ ಪ್ರಶ್ನೆ. ದೇಶದ ಪ್ರಜೆಗಳೆಲ್ಲರಿಗೂ ಹೊಟ್ಟೆ ತುಂಬ ಅನ್ನ ಮೈತುಂಬ ಬಟ್ಟೆ ಇವು ದೊರೆತ ಹೊರತು ಜಗತ್ತಿನಲ್ಲಿ ನಾವು ತಲೆಯೆತ್ತಿ ಬಾಳುವ ಆಶೆ ಇಲ್ಲ. ಇಂಗ್ಲಂಡ ಅಮೇರಿಕೆಗಳಂಥ ಸಂಪನ್ನ ರಾಷ್ಟ್ರಗಳಿಗೆ ಹೋಲಿಸಿದಾಗ ನಮ್ಮ ಸ್ಥಿತಿಯು ತೀರ ಅಸಮಾಧಾನಕರವಾಗಿಯೇ ತೋರುವದು. ಆದ್ದರಿಂದ ಆಬಾಲವೃದ್ಧರು, ಪುರುಷರು, ಸ್ತ್ರೀಯರು ಎಲ್ಲರೂ ತಮ್ಮ ಹೆಚ್ಚಿನ ವೇಳೆಯಲ್ಲಿ ಏನಾದರೂ ಹೋರೆಮಾಡಿ ಅಲ್ಪಸ್ವಲ್ಪ ಗಳಿಸಿಕೊಳ್ಳಬಹುದು. ನಾವು ಬೆಳೆದ ಹತ್ತಿಯನ್ನು ನಾವೇ ನೂತು, ನೆಯ್ದು ಸಿದ್ಧಪಡಿಸಿಕೊಂಡ ಖಾದಿಯು ಚಿಕ್ಕ ಪಂಜೆಯು ಪರದೇಶದ ಪಿತಾಂಬರಕ್ಕಿಂತಲೂ ಹೆಚ್ಚೆಂದು ತಿಳಿಯಬೇಕು. ನಾವು ಧೈರ್ಯ ಸಾಹಸ ಪ್ರಯತ್ನಗಳಿಂದ ಭಾರತಮಾತೆಯ ಉದ್ಧಾರಕ್ಕೆ ಟೊಂಕ ಕಟ್ಟಬೇಕು. ಹರಿದು ಹಂಚಿಹೋದ ಕರ್ನಾಟಕವು ಒಂದಾಗಿ ಇತರ ಪ್ರಾಂತಗಳನ್ನು ಸರಿಗಟ್ಟಿದ ದಿನವೇ ಸುದಿನವೆಂದು ಭಾವಿಸಬೇಕು.

ಮುಖ್ಯ ಮಾತುಗಳು.

ಜನರಲ್ಲಿ ಚಳವಳಿ—— ಎಲ್ಲ ಪ್ರಕಾರದ ಅನುಕೂಲತೆಗಳು—— ಏಕೀಕರಣದ ಮುಂದಿನ ಕಾರ್ಯ—— ಭಾರತದ ಬಡತನ—— ಹಿಂಗಿಸುವ ಉಪಾಯಗಳು—— ಸತತೋ

ಜ್ಯೋಗ. ಖಾದಿಯ ರಹಸ್ಯ—— ಸ್ವದೇಶಾಭಿಮಾನ——ಸಾರ್ಥತ್ಯಾಗ.

ಮೇಲಿನ ಮುಖ್ಯ ಮಾತುಗಳನ್ನು ಹೊಂದಿಸಿ ಬರೆದರೆ ಸಾರಾಂಶವಾಗುವದು.

ಸಾರಾಂಶ.

ಜನರಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಜಾಗ್ರತೆಯುಂಟಾಗಿದೆ. ಇದಕ್ಕೆ ಎಲ್ಲ ರೀತಿಯಿಂದಲೂ ಅನುಕೂಲ ಪರಿಸ್ಥಿತಿ ಉಂಟು. ಕರ್ನಾಟಕ ಪ್ರಾಂತವಾದಾಕ್ಷಣಕ್ಕೆ ಕನ್ನಡಿಗರ ಕಾರ್ಯವು ಮುಗಿಯಲಿಲ್ಲ. ಭಾರತದ ಬಡತನವು ಎಲ್ಲರ ಕಣ್ಣು ಮುಂದೆ ಕಟ್ಟಿದೆ. ತುಲನಾತ್ಮಕ ದೃಷ್ಟಿಯಿಂದ ಪರೀಕ್ಷಿಸಿದರೆ ಇತರ ಸಂಪನ್ನ ರಾಷ್ಟ್ರಗಳಿಗಿಂತ ಭಾರತದ ಸ್ಥಿತಿಯು ಅತಿಹೀನವಾಗಿರುತ್ತದೆ. ಅದಕ್ಕಾಗಿ ನಾವೆಲ್ಲರೂ ಸತತೋದ್ಯೋಗಿಗಳಾಗಬೇಕು. ಸ್ವದೇಶದಲ್ಲಿಯ ವಸ್ತುಗಳು ಪರದೇಶದ ಸುಂದರವಾದ ವಸ್ತುಗಳಿಗಿಂತ ಮಿಗಿಲೆಂದು ಭಾವಿಸಬೇಕು.

ಭಾವಾರ್ಥ.

ಕೊಟ್ಟ ವಚನ (Passage) ದೊಳಗಿನ ವಿಚಾರಗಳನ್ನು ನಮ್ಮ ಮಾತಿನಲ್ಲಿ ಹೇಳುವದೇ ಭಾವಾರ್ಥವು. ಭಾವಾರ್ಥವೆಂದರೆ ಸಾರಾಂಶ ಬರೆಹವಲ್ಲ ಅಥವಾ ವಿಸ್ತೃತ ಬರೆಹವಲ್ಲ ಅಥವಾ ಭಾವಾರ್ಥ ಬರೆಯುವಾಗ ಕೊಟ್ಟ ವಚನದಲ್ಲಿ ಯಾವದಾದರೂ ವಿಚಾರವನ್ನು ಬಿಡಕೂಡದು. ಮತ್ತು ಹೊಸ ವಿಚಾರಗಳನ್ನು ಜೋಸಕೂಡದು. ಭಾವಾರ್ಥವು ಕೊಟ್ಟ ವಚನದ ಪ್ರತಿಯೊಂದು ಭಾಗವನ್ನು ಬೇರೆ ಭಾಷೆಯಲ್ಲಿ ಭಾವ ವಿವರಿಸಿ ಬರೆಯುವದು.

ಸರಳಾನುವಾದ.

ಸರಳಾನುವಾದವೆಂದರೆ ಸುಲಭೋಪಾಯದಲ್ಲಿ ಅರ್ಥವನ್ನು ಹೇಳುವಿಕೆ.

ಉದಾ:—

ಬರೆಯದ ಕೈ ಬಂಧುಗಳಂ।
ಪೊರೆಯದ ಕೈ, ಸುತರನೆತ್ತಿ ಕೊಂಡಾಡದ ಕೈ॥
ಕರೆದು ಬುಧರ್ಗೀಯದ ಕೈ।
ಮರಗೈ ಮರುಳ್ಗೈಗಳಂತೆ ಚೂಡಾರತ್ನಾ॥

ಸರಳಾನುವಾದ:— ಬರೆಯದೆ ಇದ್ದ ಕೈ, ಅಣ್ಣ ತಮ್ಮಂದಿರನ್ನು ರಕ್ಷಣೆ ಮಾಡದ ಕೈ, ಮಕ್ಕಳನ್ನು ಎತ್ತಿಕೊಂಡು ಆಡಿಸದ ಕೈ, ಪಂಡಿತರನ್ನು ಕರೆದು ದಾನಮಾಡದ ಕೈ ಅದು ಮರದ ಕೈಯಂತೆಯೂ ಹುಚ್ಚನ ಕೈಯಂತೆಯೂ ನಿರುಪಯೋಗಿಯಾದುದು.

ಭಾವಾರ್ಥ:— ಬರೆಯಲು ಬಾರದವ, ಬಾಂಧವರಿಗೆ ಸಹಾಯ ಮಾಡದವ, ಮಕ್ಕಳಿಲ್ಲದವ, ಸತ್ಪಾತ್ರದಲ್ಲಿಯೂ ದಾನ ಮಾಡದವ, ಅವನ ಜನ್ಮ ನಿರರ್ಥಕವಾದದ್ದು.

ಅಲಂಕಾರಗಳು.

ಅಲಂಕಾರವೆಂದರೆ ಕಾವ್ಯದಲ್ಲಿರುವ ಸೌಂದರ್ಯ. ರಸಾನಂದವೇ ಕಾವ್ಯಕ್ಕೆ ಹೆಗ್ಗುರುತು. ಗುಣಾಲಂಕಾರಗಳಿಂದ ಕೂಡಿದ ಶಬ್ದಾರ್ಥಗಳು ಒಂದು ಪಕ್ಷ ಕಾವ್ಯವಾದರೂ ಚಿತ್ರ ಕಾವ್ಯವಾಗಬಹುದೇ ಹೊರತು ರಸಕಾವ್ಯವಾಗಲಾರದು. ಉತ್ತಮ ಕಾವ್ಯದಲ್ಲಿ ರಸವತ್ತಾದ ಅರ್ಥವಿರಬೇಕು. ಕಾವ್ಯದಲ್ಲಿ

ರಸವೇ ರಮಣೀಯತೆ. ಕಾವ್ಯವು ಒಂದು ಹೂವಿನ ಹಾಗೆ. ಹೂವು ರೂಪಿನಿಂದಲೂ ಸುವಾಸನೆಯಿಂದಲೂ ಪ್ರೀತಿಯನ್ನುಂಟು ಮಾಡುವದು. ಔಷಧಕ್ಕೆ ಉಪಯೋಗ ಬೀಳಬೇಕೆಂದು ಹೂವಿನ ಲಕ್ಷಣವಲ್ಲ. ಎಲ್ಲಾ ಹೂವು ಔಷಧಕ್ಕೆ ಉಪಯುಕ್ತವಾಗಿರುವದಿಲ್ಲ. ಅದು ಮೂಲಿಕೆಯ ಲಕ್ಷಣ. ಆನಂದವೇ ಕಾವ್ಯದ ಮುಖ್ಯ ಫಲ. ರಸಗಳು ಒಂಭತ್ತು.

ರಸವು ಇರುವದು ಎಲ್ಲಿ ?

ಲೋಕದಲ್ಲಿ ಈ ಹಣ್ಣು ರಸವತ್ತಾಗಿದೆ. ಈ ಪದಾರ್ಥವು ರುಚಿಯಾಗಿದೆ ಎಂದು ಹೇಳುವಂತೆ ಈ ಕಾವ್ಯವು ರಸವತ್ತಾಗಿದೆ, ನೀರಸವಾಗಿದೆ ಎಂದು ಹೇಳುವವಾಡಿಕೆಯುಂಟು. ವಸ್ತುವಿನ ರುಚಿ ತಿಳಿಯಬೇಕಾದರೆ ಅದು ನಾಲಿಗೆಯ ಮೇಲೆ ಬೀಳಬೇಕು. ಸಕ್ಕರೆಯ ಸವಿಯತ್ವವನ್ನು ವರ್ಣಿಸಲು ಬರುವದಿಲ್ಲ. ಸಕ್ಕರೆ ಸವಿಯದೆ ಇಷ್ಟೇ ಅನ್ನಬಹುದು. ಇದರಂತೆಯೇ ರಸವಿದ್ದದ್ದೇ ಕಾವ್ಯ. ಕಾವ್ಯಗಳನ್ನು ಓದಿದರೆ ಬರತಕ್ಕ ಆನಂದವು ಸ್ಥೂಲೇಂದ್ರಿಯಗಳ ಮೂಲಕ. ಎಲ್ಲ ಕಾವ್ಯಾನ್ನವು ಪ್ರಪಂಚದಲ್ಲಿ ಮತ್ತೆ ಯಾವ ವಿಷಯ ಸುಖದಿಂದ ಉಂಟಾಗುವದಿಲ್ಲ.

ಒಂದು ರಸದ ಜೊತೆಯಲ್ಲಿ ಕೆಲವು ರಸಗಳು ಬಂದರೆ ಹೊಂದಿಕೆಯಾಗಿ ಚನ್ನಾಗಿ ಇರುತ್ತದೆ. ಮತ್ತೆ ಕೆಲವು ರಸಗಳು ಬಂದರೆ ಒಪ್ಪುವದಿಲ್ಲ. ಶೃಂಗಾರ-ವೀರ, ಶೃಂಗಾರ-ಹಾಸ್ಯ, ವೀರ-ಅದ್ಭುತ, ವೀರ-ರೌದ್ರ, ಶೃಂಗಾರ ಅದ್ಭುತ, ಇವು ಮೈತ್ರಿ; ಶೃಂಗಾರ ಭೀಭತ್ಸ, ಶೃಂಗಾರ ಕರುಣ, ವೀರ ಭಯಾನಕ, ಶಾಂತ ರೌದ್ರ ಇವು ವಿರೋಧಿಗಳು.

ರಸದೋಷಗಳು.

ಕಾವ್ಯ ರಮಣೀಯತೆಗೆ ಕುಂದನ್ನು ಅಥವಾ ಹಾನಿಯನ್ನು ತರತಕ್ಕದ್ದೇ ದೋಷ. ರಸಕ್ಕೆ ಅಡ್ಡಿಯಾಗುವದೇ ದೋಷ. ಕಾವ್ಯವೂ ಶಬ್ದಮಯ ಶಬ್ದಗಳು ಅರ್ಥವುಳ್ಳವುಗಳು. ಅರ್ಥಾನುಸಂಧಾನದಿಂದ ರಸಾನುಭವವು ಒದಗುತ್ತದೆ. ಶಬ್ದಾರ್ಥದೋಷಗಳಿಂದ ರಸಕ್ಕೆ ಅಡ್ಡಿಯಾಗುತ್ತದೆ. ಒಂದೇ ರಸವನ್ನು ಬಿಟ್ಟುಬಿಟ್ಟು ಪ್ರತಿಪಾದಿಸುವದು, ಪ್ರಧಾನಾಂಶಗಳಿಗೆ ತಕ್ಕಷ್ಟು ಗಮನ ಕೊಡದೆ ಹೋಗಿರುವದು, ಯಾವದಾದರೂ ರಸವು ಒಂದೇ ಸವನೆ ಧಾರಳವಾಗಿ ಹೋಗುತ್ತಿದ್ದಾಗ ತಟ್ಟನೆ ಅದನ್ನು ನಿಲ್ಲಿಸಿಬಿಡುವದು. ಒಂದೇ ಕಡೆಯಲ್ಲಿ ಎರಡು ರಸಗಳನ್ನು ಪ್ರತಿಪಾದಿಸುವದು ಇವು ರಸದೋಷಗಳು.

ಅಲಂಕಾರಗಳಲ್ಲಿ ಶಬ್ದಾಲಂಕಾರ, ಅರ್ಥಾಲಂಕಾರ ಎಂಬ ಎರಡು ಮುಖ್ಯ ಭೇದಗಳು.

ಶಬ್ದಾಲಂಕಾರ.

ಒಂದಕ್ಕಾದರೂ, ಎರಡಕ್ಕಾದರೂ ಮೂರಕ್ಕಾದರೂ ವ್ಯಂಜನಗಳಿಗೆ ಬರುವ ಪುನರುಕ್ತಿಯು ಶಬ್ದಾಲಂಕಾರ.

ಉದಾ:—ಗಳಿಯಿಸುತಿರೆ ಕಟರಿ ಭರಂ.

ಅರ್ಥಾಲಂಕಾರ.

ಅರ್ಥಾಲಂಕಾರದಲ್ಲಿ ಮುಖ್ಯವಾಗಿ ಉಪಮೇಯ, ರೂಪಕ ಎಂಬ ಭೇದಗಳುಂಟು

ಉಪಮಾಲಂಕಾರ.

ಒಂದು ವಿಷಯವನ್ನು ಮತ್ತೊಂದು ವಿಷಯಕ್ಕೆ

ಹೋಲಿಸಿ ಹೇಳುವ ಕ್ರಮ.

ಉದಾ:—ಈ ಅಕ್ಷರಗಳು ಮುತ್ತಿನಂತೆ ಅಂದವಾಗಿವೆ.

ರೂಪಕಾಲಂಕಾರ.

ಉಪಮೇಯುವನ್ನು ಹೇಳದೆ ಒಂದು ವಸ್ತುವನ್ನು ಇನ್ನೊಂದು ವಸ್ತುವಾಗಿತ್ತೆಂದು ಭೇದವಿಲ್ಲದೆ ಹೇಳಿದರೆ ರೂಪಕಾಲಂಕಾರವಾಗುವದು.

ಉದಾ:—ಈ ಅಕ್ಷರಗಳು ಮುತ್ತುಗಳು.

ಕಾವ್ಯಪ್ರಶಂಸೆ.

ಗದ್ಯವು ಪದ್ಯದಿಂದ ಭಿನ್ನವಾಗಿರುತ್ತದೆ ಗದ್ಯವು ಮಿದುಳಿನ ವಿಚಾರಗಳಿಗೆ ಒಳಪಟ್ಟದ್ದು. ಪದ್ಯವು ಹೃದಯದ ವಿಚಾರಗಳಿಗೆ ಸಂಬಂಧಪಟ್ಟದ್ದು ಇರುತ್ತದೆ. ಕವಿಯ ಅಂತರಂಗವು ಚಲವಿಚಲಿತವಾಗಲು ಹೃದಯಂಗಮವಾದ ಕಾವ್ಯವು ಅಂತಃಸ್ಫೂರ್ತಿಯಿಂದ ಹೊರಡುವದು. ಆದುದರಿಂದ ಪದ್ಯವು ಭಾವನಾಪ್ರಧಾನವಾಗಿದೆ. ಕವಿಯು ತಾನು ಪದ್ಯವನ್ನು ರಚಿಸುವಾಗ ಯಾವ ಭಾವನೆಗಳ್ಳುಳವನಾಗಿದ್ದನೋ ಅವೇ ಭಾವನೆಗಳು ಪದ್ಯವನ್ನು ಓದುವವರಲ್ಲಿ ಉತ್ಪನ್ನವಾದರೆ ಕವಿಯ ಕಾವ್ಯವು ಸಾರ್ಥಕವಾದಂತಾಯಿತು. ಕಾವ್ಯವು ಕವಿಯ ಅನುಭವದ ಸರಿಯಾದ ದೃಶ್ಯವಾಗಿರುತ್ತದೆ. ಕವಿಯ ಕಲ್ಪನೆಯು ಚಿಕ್ಕಮಗುಗಳಂತೆ ಪರಿಶುದ್ಧವಾದುದು. ಕಾವ್ಯಗಳನ್ನು ಓದುವಾಗ ಕೆಳಗಿನ ಕೆಲವು ಮಾತುಗಳ ಕಡೆಗೆ ಲಕ್ಷ್ಯ ಕೊಡಬೇಕು.

೧ ಕಾವ್ಯವನ್ನು ಗದ್ಯದಂತೆ ಓದದೆ ಕಥನ ಮಾಡಬೇಕು.

೨ ಅದರಲ್ಲಿದ್ದ ಮಾಧುರ್ಯವು ಗಟ್ಟಿಯಾಗಿ ಪಠಿಸುವದ

ರಿಂದಲೇ ಉಂಟಾಗುತ್ತದೆ.

೩ ಕಾವ್ಯವು ಯಾತರ ಬೆಗ್ಗೆ ಇದೆ ಎಂಬದನ್ನು ಅರಿತುಕೊಳ್ಳಬೇಕು.

೪. ಚಿತ್ರಕಾರನಂತೆ ಕವಿಯು ಯಾವ ಮನೋಹರ ಶಬ್ದಗಳನ್ನು ಚಿತ್ರಿಸಿರುವನೆಂಬದನ್ನು ಗುರುತಿಸಬೇಕು.

೫ ಯಾವ ಪ್ರಕಾರವಾಗಿ ಹಣ್ಣನ್ನು ಭುಂಜಿಸಿದಾಗಲೇ ಹಣ್ಣಿನ ರುಚಿಯು ಗೊತ್ತಾಗುತ್ತದೆಯೋ, ವಾಸನೆಯನ್ನು ನೋಡಿದಾಗಲೇ ಇದು ಗುಲಾಬಿ ಹೂ ಎಂದು ಕಲ್ಪನೆ ಬರುತ್ತದೆಯೋ ಆದರಂತೆ ಬರೆ ವರ್ಣನೆಯಿಂದ ಕಾವ್ಯದ ಮನೋಹರತೆಯು ಕಂಡು ಬರಲಾರದು. ಸೂಚನೆಗಳು ತಕ್ಕಷ್ಟು ಉಪಯುಕ್ತವಾಗಲಾರವು

ಅರ್ಥದೋಷಗಳು.

ಮುಖ್ಯವಾಗಿ ಹೇಳಬೇಕೆಂದಿರುವ ವಿಷಯಕ್ಕೆ ಪುಷ್ಟಿಯನ್ನು ತಂದೆ ಇರುವ ಸಂಗತಿಗಳನ್ನು ಹೇಳುವದು, ಸುಲಭವಾಗಿ ತಿಳಿದು ಕೊಳ್ಳಲಿಕ್ಕೆ ಕ್ಲೇಶವನ್ನುಂಟು ಮಾಡಿಕೊಳ್ಳುವದು, ಯಾವದಾದರೂ ಒಂದು ವಸ್ತುವನ್ನು ನಿಂದಿಸಿ(ಹೊಗಳಿ) ಅದಕ್ಕೆ ವಿರುದ್ಧವಾಗಿ ಮತ್ತೇನನ್ನಾದರೂ ಹೇಳುವದು, ಹೇಳಿದ್ದನ್ನೇ ಹೇಳುವದು, ಲೋಕ ಶಾಸ್ತ್ರಕ್ಕೆ ವಿರದ್ಧವಾದ ಪದ್ಧತಿಯಲ್ಲಿ ಹೇಳುವದು, ಕವಿಯ ಭಾವವು ಹೀಗೋ ಹಾಗೋ ಎಂದು ಸಂಶಯ ಉಂಟಾಗುವಂತೆ ಹೇಳುವದು, ಲೋಕ ರೂಢಿಗೆ ವಿರುದ್ಧವಾಗಿ ಹೇಳುವದು, ಹೊಸ ಬಗೆಯಲ್ಲಿ ಹೇಳದೆ ಒಂದೇ ಬಗೆಯಲ್ಲಿ ಹೇಳುವದು, ಒಬ್ಬರ ಮನಸ್ಸಿಗೆ ಸಂಕೋಚವುಂಟಾಗುವಂತೆ ಹೇಳುವದು, ವಿದ್ಯೆಯ ವಿರೋ

ಥವಾಗಿ ಹೇಳುವದು ಇವು ಅರ್ಥ ದೋಷಗಳು.

ಸೂಚನೆಗಳು.

(೧) ಕೊಟ್ಟಭಾಗವನ್ನು ಕನಿಷ್ಟ ಎರಡು ಸಾರೆ ಓದು.

(೨) ಕವಿಯ ಮನೋಭಾವವನ್ನು ಅರಿಯಬೇಕು.

(೩) ಸೌಂದರ್ಯವನ್ನು ಖಂಡ ಮಾಡದೆ ಅಖಂಡದಲ್ಲಿ ಅನಭವಿಸಬೇಕು.

(೪) ಕವಿಯು ಯಾವ ಪರಿಸ್ಥಿತಿಯಲ್ಲಿ ರಚಿಸಿರುವನೆಂಬದನ್ನು ಅರಿಯಬೇಕು.

(೫) ಕವಿಯ ಚಾತುರ್ಯವನ್ನೂ, ಯೋಗ್ಯ ಶಬ್ದಗಳನ್ನೂ, ವಚನಗಳನ್ನೂ ಅಭ್ಯಾಸ ಮಾಡಬೇಕು.

(೬) ಶಬ್ದ ಚಿತ್ರಗಳನ್ನು ಗುರುತಿಸಬೇಕು.

(೭) ಚಿತ್ತ ವಿಕಾರಗಳ ಏರಿಳಿತಗಳನ್ನು ಮನಸದಟ್ಟು ಮಾಡಬೇಕು

(೮) ಭಾಷೆಯ ಯೋಗ್ಯತೆಯನ್ನು ಅಭ್ಯಾಸ ಮಾಡಬೇಕು.

(೯) ಉತ್ತಮವೆನಿಸಿದ ಸಾಲುಗಳನ್ನು ನೆನಪಿಡಬೇಕು.

---

೫ ಗುಣವಿಮರ್ಶೆ

--೧--

ಹಿಂದುಸ್ತಾನವು ಹಳ್ಳಿಗಳ ದೇಶವು. ಹಳ್ಳಿಗಳು ತಮ್ಮ ಉತ್ತಮ ಸ್ಥಿತಿಗೆ ಎರಪಾಡರೆ ಆ ದೇಶವು ಸ್ವರಾಜ್ಯಕ್ಕೆ

ಪಾತ್ರವಾಗುವದು. ಇಂಥ ಹಳ್ಳಿಗಳ ಹಿರಿಯರು ಹಳ್ಳಿಯ ತಮ್ಮ ಆದಾಯವನ್ನು ಕಟ್ಟಿಕೊಂಡು ತಮ್ಮ ವಾಸಸ್ಥಳವನ್ನು ತ್ಯಜಿಸಿ ಪಟ್ಟಣಗಳ ಸೊಗಸಿಗೆ ಮರುಳಾಗಿ ಅವುಗಳನ್ನು ಸೇರುವರು. ಅವರು ವಿಷಯೋಪಭೋಗಕ್ಕೆಳಸಿ ಧರ್ಮಾಚರಣೆಯನ್ನು ಬಿಟ್ಟು ಸ್ವೇಚ್ಛಾಚಾರಿಗಳಾಗುವರು ಒಬ್ಬರ ಹಂಗು ಒಬ್ಬರಿಗೆ ಉಳಿಯುವದಿಲ್ಲ. ಎಲ್ಲರೂ ಸ್ವತಂತ್ರವೆಂದು ಭಾವಿಸಿ ಸ್ವಹಿತ ಸಾಧಕರಾಗುವರು. ಪರಸ್ಪರರಲ್ಲಿಯ ಸ್ನೇಹಭಾವವು ಅಳಿದು ಹೋಗುವದು ಊಟ—ಅಡಿಗೆ, ಆಟ—ನೋಟಗಳಲ್ಲಿ ಆಸಕ್ತಿಯುಳ್ಳವರಾಗಿ ತಮ್ಮ ತಮ್ಮ ಉದ್ಯೋಗಗಳನ್ನು ಮರೆತು ಬಿಡುವರು. ಅವರು ತಮ್ಮ ಸಂಸಾರಕ್ಕೆ ಬೇಕಾಗುವ ಸಾಮುಗ್ರಿಗಳನ್ನು ಎಂದಿನಂತೆ ತಾವೇ ಒದಗಿಸಿಕೊಳ್ಳದೆ ಪರರನ್ನು ಅವಲಂಬಿಸಿರುವರು. ಅವರಿಗೆ ಕೆಲಸ ಬೊಗಸೆಗಳು ಉಳಿಯದಿರಲು ಹಾಳು ಹರಟೆಗಳನ್ನು ಕೊಚ್ಚುತ್ತ ಮನೆಮಾರುಗಳನ್ನು ಹಾಳುಗೆಡವಿ ಯಾವ ಕೆಲಸವನ್ನು ಮಾಡಲಾರದವರಾಗುವರು.

ಈ ಮೇರೆಗೆ ಹಳ್ಳಿಯ ಹಿರಿಯರು ಹಳ್ಳಿಯ ಧನವನ್ನೆತ್ತಿಕೊಂಡು ಪಟ್ಟಣಕ್ಕೆ ಹೋಗಿ ವಿಲಾಸಿಗಳಾದರು. ಇದಲ್ಲದೆ ಹಳ್ಳಿಯ ಬುದ್ಧಿಶಾಲಿಗಳೂ ಕೈಕೆಲಸಗಾರರೂ ಹಳ್ಳಿಯವರಿಗೆ ಉಪಯೋಗವುಳ್ಳವರಾಗದೆ ಪಟ್ಟಣಗಳನ್ನು ಸೇರಿ ತಮ್ಮ ಶ್ರಮದ ಫಲವನ್ನೂ ಜಾಣತೆಯನ್ನೂ ಪಟ್ಟಣಕ್ಕೆ ಈಡುಮಾಡುವರು. ಆದಕಾರಣ ನಮ್ಮ ದೇಶವು ಹಾಳಾಗಬಾರದೆಂದರೆ “ಹಳ್ಳಿಗಳಿಗೆ ತಿರುಗಿರಿ” ಎಂಬ ಮಾತನ್ನು ನಾವು ಮನಗಾಣಿಸಬೇಕಲ್ಲವೆ ?

ಮೇಲಿನ ಗದ್ಯಭಾಗವನ್ನು ಓದಿಕೊಂಡು ಕೆಳಗಿನ ಪ್ರಶ್ನಗಳಿಗೆ ಉತ್ತರ ಬರೆಯಿರಿ.

೧ ಈ ಮೇರೆಗೆ ಬುದ್ಧಿ ಹೇಳುವವನ ಉದ್ದೇಶಗಳೇನು ?

೨ ಅವನ ಸೂಚನೆಗಳು ನಿಮಗೆ ಸಮ್ಮತವೇ ಯಾಕೆ ?

೩ ಪಟ್ಟಣಗಳನ್ನು ಸೇರಿದ ಜನರು ಯಾವ ಯಾವ ಅವನತಿಯನ್ನು ಹೊಂದುವರೆಂದು ಹೇಳಿದೆ ?

೪ ಹಳ್ಳಿಗಳು ಯಾಕೆ ಹಾಳಾಗಿವೆ ?

೫ ಕೆಳಗಿನ ಶಬ್ದಗಳ ಅರ್ಥವನ್ನು ಸ್ಪಷ್ಟ ಮಾಡಿರಿ. ಸ್ವೇಚ್ಛಾಚಾರಿ, ಸ್ವಹಿತಸಾಧಕ, ಈಡುಮಾಡು, ವಿಲಾಸಿ.

೬ ಕೆಳಗಿನ ವಾಕ್ಯಗಳ ಅರ್ಥವನ್ನು ಸ್ಪಷ್ಟಮಾಡಿಹೇಳಿರಿ.

(ಅ) ಒಬ್ಬನ ಹಂಗು ಒಬ್ಬರಿಗೆ ಉಳಿಯುವದಿಲ್ಲ.

(ಬ) ಹಳ್ಳಿಯ ಹಿರಿಯರು ಹಳ್ಳಿಯ ಧನವನ್ನು ಎತ್ತಿಕೊಂಡು ಹೋಗುವರು.

ಉತ್ತರ.

೧. (ಅ) ಎಲ್ಲರೂ ಹಳ್ಳಿಯ ಸುದಾರಣೆಗೆ ಪ್ರಯತ್ನಿಸಬೇಕು.

(ಬ) ಹಳ್ಳಿಗಳು ತುಚ್ಛವೆಂದು ತಿಳಿದು ಪಟ್ಟಣವನ್ನು ಸೇರಬಾರದು.

(ಕ) ಹಳ್ಳಿಯ ಹಿರಿಯರು ನಿರುದ್ಯೋಗಿಗಳಾಗದೆ ಹಳ್ಳಿಯ ಉನ್ನತಿಗೆ ಸಹಾಯಮಾಡಬೇಕು.

(ಡ) ಹಳ್ಳಿಯ ದುಡ್ಡನ್ನು ಪಟ್ಟಣಕ್ಕೆ ಒಯ್ಯುವದರ ಬದಲು ಪಟ್ಟಣದ ಲಾಭವನ್ನು ಹಳ್ಳಿಗೆ ಒದಗಿಸಿ ಕೊಡಬೇಕು.

(ಇ) ಹಳ್ಳಿಯ ಸುಧಾರಣೆಗಳೇ ಸ್ವರಾಜ್ಯದ ಗುಟ್ಟು.

೨. ಈಗಿನ ಕಾಲದಲ್ಲಿ ಹಳ್ಳಿಗಳು ಬಹಳ ಕೀಳ ಸ್ಥಿತಿಗೆ

ಇಳಿದಿರುವದರಿಂದ ಪ್ರತಿಯೊಬ್ಬರು ಹಳ್ಳಿಯ ಸುಧಾರಣೆಯನ್ನು ಮಾಡುವದು ಅತ್ಯವಶ್ಯ. ಎಷ್ಟೋ ಜನರು ಪಟ್ಟಣದ ಸೊಗಸಿಗೆ ಮರುಳಾಗಿ ಪಟ್ಟಣ ಸೇರಿದ್ದು ನಿಜ. ಹೀಗೆ ಮಾಡುವದು ಅಯೋಗ್ಯವು. ಹಿಂದುಸ್ಥಾನವು ಹಳ್ಳಿಯ ದೇಶ. ಹಳ್ಳಿಗಳು ಹಾಳಾಗಿರುವದರಿಂದ ದೇಶವೇ ಹಾಳಾದಂತೆ ಆಗಿರುವದು. ಪಟ್ಟಣಕ್ಕೆ ಹೋದ ದುಡ್ಡು ವಿಲಾಸಕ್ಕೆ ನೀರಿನಂತೆ ಖರ್ಚಾಗಿ ಹೋಗುತ್ತದೆ. ಆದರೆ ಪಟ್ಟಣದಿಂದ ಹಳ್ಳಿಗೆ ಖರ್ಚು ಮಾಡಿದ್ದು ಪಟ್ಟಣಕ್ಕೆ ಒಂದು ರೀತಿಯಿಂದ ಸಹಾಯವಾಗುವದು. ಹಳ್ಳಿಯ ಸುಧಾರಣೆಯೆಂದರೆ ದೇಶ ಸುಧಾರಣೆಯು.

೩. (ಅ) ವಿಷಯೋಪಭೋಗಕ್ಕೆಳಿಸುತ್ತಾರೆ.

(ಬ) ಧರ್ಮಾಚರಣೆಯನ್ನು ಬಿಡುತ್ತಾರೆ.

(ಕ) ಸ್ವೇಚ್ಛಾಚಾರಿಗಳಾಗುತ್ತಾರೆ.

(ಡ) ಸ್ವಾರ್ಥಿಗಳಾಗುತಾರೆ.

(ಇ) ಸ್ನೇಹ ಭಾವವನ್ನು ಕಳೆದುಕೊಳ್ಳುತ್ತಾರೆ.

(ಫ) ಪರಾವಲಂಬಿಗಳಾಗಿ ಹರಟೆ ಕೊಚ್ಚುವದರಲ್ಲಿ ವೇಳೆ ಕಳೆಯುತ್ತಾರೆ.

(ಗ) ತಮ್ಮ ಉದ್ಯೋಗವನ್ನು ಮರೆತು ಮನೆಮಾರುಗಳನ್ನು ಹಾಳುಗೆಡವಿಕೊಳ್ಳುತ್ತಾರೆ.

೪. (ಅ) ಹಳ್ಳಿಗಳ ಹಿರಿಯರು ತಮ್ಮ ಆದಾಯವನ್ನು ಕಟ್ಟಿಕೊಂಡು ಪಟ್ಟಣಗಳನ್ನು ಹೋಗಿ ಸೇರುವರು.

(ಬ) ಹಳ್ಳಿಗಳೊಳಗಿನ ಬುದ್ಧಿಶಾಲಿಗಳು ಮತ್ತು ಕೆಲಸಗಾರರು ಹಳ್ಳಿಯನ್ನು ಬಿಟ್ಟು ಪಟ್ಟಣಗಳನ್ನು ಸೇರುತ್ತಾರೆ.

೫. ಸ್ವೇಚ್ಛಾಚಾರಿ = ಮನಬಂದಂತೆ ವರ್ತಿಸುವವ.
ಸ್ವಹಿತಸಾಧಕ = ತನ್ನ ಲಾಭವನ್ನೇ ನೋಡುವವ,
ಈಡಾಡು = ಆರ್ಪಿಸು
ವಿಲಾಸಿ = ಸ್ತ್ರೀಲೋಲುಪ (ವಿಷಯೋಪಭೋಗಿ)

೬. ಪ್ರತಿಯೊಬ್ಬರು ಬೇರೆ ಹಳ್ಳಿಗಳಿಂದ ಬಂದವರಾದುದರಿಂದ ಒಬ್ಬರೊಬ್ಬರಲ್ಲಿ ಯಾವ ಪ್ರಕಾರದ ಸಂಬಂಧವು ಇರುವದಿಲ್ಲ. ಆದುದರಿಂದ ಒಬ್ಬರ ಹಂಗು ಒಬ್ಬರಿಗೆ ಉಳಿಯುವದಿಲ್ಲ.

(ಬ) ಹಳ್ಳಿಯಲ್ಲಿದ್ದಂಥ ದೊಡ್ಡ ದೊಡ್ಡ ಜಮೀನದಾರರು ಪಟ್ಟಣಕ್ಕೆ ಹೋಗಿ ಇರಹತ್ತುವರು ತಮ್ಮ ಹೊಲದ ಉತ್ಪನ್ನವನ್ನು ಅಲ್ಲಿಯೇ ತೆಗೆದುಕೊಂಡು ಹೋಗುವರು. ಹಳ್ಳಿಯ ಹಿರಿಯರು ಧನವನ್ನು ಎತ್ತಿಕೊಂಡು ಹೋದಂತಾಯಿತು.

— ೨ —

ಕೆಳಗಿನ ಪದ್ಯವನ್ನು ಓದಿ ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಮೀನು ನೀರೊಳಗಿದ್ದೊಡೇನೈ ।
ಧ್ಯಾನವನು ಬಕ ಮಾಡಲೇನದು ।
ಕಾನನವನಾಶ್ರಯಿಸಿ ಮರ್ಕಟನಿದ್ದರೇನಲ್ಲಿ ॥
ಮೌನದಲಿ ಕೋಗಿಲೆಯಿರಲ್ಕದ ।
ಕೇನು ಫಲ ಸುಜ್ಞಾನವಿಲ್ಲದ ।
ಮೌನ ವೊಂದಲಾಗಿರ್ದ ವ್ರತದಲ್ಲೇನು ಫಲವೆಂದ ॥

(೧) ಮೋಕ್ಷಾಪೇಕ್ಷೆಯುಳ್ಳವರು ಸ್ವಾಭಾವಿಕವಾಗಿ ಕ್ಯೆ

ಕೊಳ್ಳುವ ವೃತಗಳಾವವು ?

(೨) ಸ್ನಾನ ಮೊದಲಾದ ಬಾಹ್ಯ ಕರ್ಮಗಳಲ್ಲಿ ಏನೂ ಫಲವಿಲ್ಲ ಎಂಬುದನ್ನು ಕವಿಯು ಯಾವ ಸಾಲಿನಲ್ಲಿ ಹೇಗೆ ಸಿದ್ಧಪಡಿಸಿದ್ದಾನೆ ?

(೩) ಬಕಪಕ್ಷಿಯು ಧ್ಯಾನವು ನಿರರ್ಥಕವಾಗಿರುವದು ಹೇಗೆ ?

(೪) ಕಾನನವನಾಶ್ರಯಿಸಿ ಮೌನವೃತವನ್ನು ಆಚರಿಸು ವದರಿಂದ ಆಗುವ ಪ್ರಯೋಜನವೇನು ?

(೫) ಮೋಕ್ಷಕ್ಕೆ ಅವಶ್ಯವಾದ ವಸ್ತುವು ಯಾವದು ?

ಉತ್ತರ.

(೧) (ಅ) ದೇವರ ಧ್ಯಾನ (ಬ) ಮೌನದಿಂದಿರುವದು. (ಕ) ಏಕಾಂತವಾಸ. (ಡ) ನೀರಲ್ಲಿ ನಿಂತು ತಪಸ್ಸು ಮಾಡುವದು.

(೨) ಮೊದಲನೇ ಸಾಲಿನಲ್ಲಿ ಮೀನು ನೀರೊಳಗೆ ಇದ್ದ ಡೇನೈ ಎಂಬ ಮಾತಿನಿಂದ ಸ್ನಾನ ಬಾಹ್ಯಕರ್ಮಗಳಲ್ಲಿ ಏನೂ ಫಲವಿಲ್ಲೆಂಬುದು ಸಿದ್ಧವಾಗುತ್ತದೆ.

(೩) ಬಕಪಕ್ಷಿಯು ತನ್ನ ದಂಡೆಗೆ ಕುಳಿತು ಆಹಾರದ ಧ್ಯಾನವನ್ನು ಮಾಡುವದೇ ಹೊರತು ದೇವರ ಧ್ಯಾನವನ್ನು ಮಾಡುವದಿಲ್ಲ. ಆದುದರಿಂದ ಅದು ನಿರರ್ಥಕ.

(೪) ಮೌನ ವೃತವನ್ನು ಆಚರಿಸುವದಕ್ಕಾಗಿ ಅರಣ್ಯವನ್ನು ಸೇರುತ್ತಾರೆ. ಆದುದರಿಂದ ಸಂಸಾರಿಕ ಸಂಗತಿಯು ಇಲ್ಲದಂತಾಗುತ್ತದೆ. ಹೀಗೆ ಮಾಡುವದು ಮೋಕ್ಷಕ್ಕೆ ಸಾಧನವೆಂದು ಹೇಳುತ್ತಾರೆ. ಈ ರೀತಿಯಿಂದ ಅರಣ್ಯದಲ್ಲಿ ಮೌನ

ವಾಗಿದ್ದರೂ ಕೂಡ ಮನಸ್ಸೆಲ್ಲ ಸಂಸಾರದಲ್ಲಿಯೇ ಇದ್ದರೆ ತ್ಯಾಗ ವೃತ್ತಿಯು ಬಾರದೇ ಇದ್ದರೆ ಸರ್ವಸ್ವವನ್ನು ಬಿಟ್ಟು ಅರಣ್ಯವನ್ನು ಸೇರಿ ಯಾರ ಸಂಗಡ ಮಾತನಾಡದೆ ಕುಳಿತರೂ ಕೂಡ ಅದರಿಂದ ಯಾವ ಪ್ರಯೋಜನವಾಗುವದಿಲ್ಲ. ಈ ರೀತಿಯಾಗಿ ಮಾಡುವದು ಮಂಗನು ಅರಣ್ಯದಲ್ಲಿದ್ದಂತೆ ಆಗುತ್ತದೆ.

(ಋ) ಮೀನದಂತೆ ಸ್ನಾನವೂ ಬಕನಂತೆ ಧ್ಯಾನವೂ ಮಂಗನಂತೆ ಅರಣ್ಯವಾಸವೂ, ಕೋಗಿಲೆಯಂತೆ ಮೌನವ್ರತವೂ— -ಇವೆಲ್ಲ ಮೋಕ್ಷಕ್ಕೆ ಅತ್ಯಾವಶ್ಯಗಳಾದವಲ್ಲ. ಸುಜ್ಞಾನವಿದ್ದರೆ, ಇವು ಇಲ್ಲದಿದ್ದರೂ ನಡೆಯಬಹುದು. ಆದುದರಿಂದ ಮೋಕ್ಷಕ್ಕೆ ಸುಜ್ಞಾನವೇ ಅತ್ಯವಶ್ಯವಾದ ಸಾಧನ.

—೩—

ಸಜ್ಜನರ ಸಂಗವು ಹೆಜ್ಜೇನು ಸವಿದಂತೆ ।
ದುರ್ಜನರ ಕೂಡ ಒಡನಾಟ ಬಚ್ಚಲದ |
ರೊಜ್ಜಿನಂತಿಹುದು ಸರ್ವಜ್ಞ ॥

ಮೇಲಿನ ಪದ್ಯವನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧ ಕವಿಯು ಸಜ್ಜನರ ಸಂಗವನ್ನು ಏತಕ್ಕೆ ಹೋಲಿಸಿರುವನು ? ಯಾಕೆ ?

೨ ಈ ಪದ್ಯದಲ್ಲಿ ಇದ್ದ ಒಂದೇ ಅರ್ಥದ ಶಬ್ದಗಳನ್ನು ವಿರುದ್ಧಾರ್ಥಕ ಶಬ್ದಗಳನ್ನು ಹುಡುಕಿ ತೆಗೆಯಿರಿ

೩ ಕವಿಯು ದುರ್ಜನ ಸಂಗವು ಅತಿ ಕೆಟ್ಟ ಎಂಬದನ್ನು ಹೇಗೆ ತೋರಿಸುವನು ?

೪ ಯಾವ ಮಾತುಗಳಿಂದ ಕವಿಯ ಜಾಣ್ಮೆಯು ಗೊತ್ತಾಗುವಂತಿದೆ?

ಉತ್ತರ.

೧ ಸಜ್ಜನರ ಸಂಗವು ಹೆಜ್ಜೇನಿನಷ್ಟು ಸವಿಯಾದದ್ದೆಂದು ಹೋಲಿಸಿದ್ದಾನೆ.

೨ ಒಂದೇ ಅರ್ಥದ ಶಬ್ದ.

ಸಂಗತಿ, ಒಡನಾಟ.

ವಿರುದ್ಧಾರ್ಥಕ ಶಬ್ದಗಳು.

ಸಜ್ಜನ, ದುರ್ಜನ

ಹೆಜ್ಜೇನು, ಬಚ್ಚಲದ ರೊಜ್ಜು.

೩ ದುರ್ಜನರ ಸಂಗಕ್ಕೂ ಬಚ್ಚಲದ ರೊಜ್ಜಿಗೂ ಹೋಲಿಕೆ ಇದೆ. ಬಚ್ಚಲದ ರೊಜ್ಜಿನಷ್ಟು (ಹೊಲಸಿನಷ್ಟು) ಅಸಹ್ಯವಾದ ವಸ್ತುವು ಬೇರೊಂದಿಲ್ಲ.

೪ ಶಬ್ದಗಳ ದ್ವಿರುಕ್ತಿ ಇಲ್ಲದೆ ಒಂದೇ ಅರ್ಥದ ಸಂಗ, ಒಡನಾಟ, ಮೊದಲಾದ ಬೇರೆ ಬೇರೆ ಶಬ್ದಗಳನ್ನು ಉಪಯೋಗಿಸಿರುವನು. ಶಬ್ದಗಳು ಅರ್ಥಪೂರ್ಣಗಳಾಗಿವೆ. ಹೋಲಿಕೆಯು ಅಪ್ರತಿಮವಾಗಿವೆ. ಸಜ್ಜನರ ಸಂಗತಿಯು ಅತಿ ಸವಿಯಾದ ವಸ್ತುವಿಗೂ, ದುರ್ಜ್ಜನರ ಸಂಗತಿಯು ಅತ್ಯಂತ ಹೇಯವಾಗಿರುವದೆಂಬದನ್ನು ಅತಿ ಅಸಹ್ಯವಾದ (ಸವಿಯಿಲ್ಲ ಇಷ್ಟೇ ಅಲ್ಲ, ಅದರ ವಾಸನೆಯನ್ನು ಕೂಡ ತೆಗೆದುಕೊಳ್ಳಲು ಅಸಾಧ್ಯವಾದ ವಸ್ತು) "ಬಚ್ಚಲ ರೊಜ್ಜು" ವಸ್ತುವಿಗೆ ಹೋಲಿಸಿ ಹೇಳಿದ್ದಾನೆ.

—•—೪—•—

ಚರಣ ನಖ ದೀಧಿತಿಯು ಪೀತಾಂ |
ಬರದ ದಿವ್ಯ ವಿಭೂಷಣದ ಭಾ |
ಸುರಶರೀರದ ಹೊಗರ ಹೊಸ ಜವ್ವನದ ವಿಭ್ರಮದ ||
ಪರಮ ತೇಜೋಮಯನು ಮಾಯಾ |
ನರನು ಬಂದನು ನೆರೆದ ಪೃಥ್ವೀ |
ಶ್ವರ ಸಭಾ ಮಧ್ಯದಲಿ ಬೆರಗಾಗಿರೆ ಸಮಸ್ತಜನ ||೧||

ದೀಧಿತಿ = ಕಾಂತಿ. ವಿಭ್ರಮ = ಬೆಡಗು, ಅಂದ.

ಸುರರಿಗೀಶ್ವರನಂತೆ ಧರಣೀ |
ಸುರರಿಗಮಲ ಬ್ರಹ್ಮದೊಲಿತ |
ರರಿಗೆ ರಾಜ ಕುಮಾರನಂದದಿ ನಿಖಿಳರಾಯರಿಗೆ ||
ಧರೆಗಧೀಶ್ವರನಾಗಿ ಮಾನಿನಿ |
ಯರಿಗೆ ಮನ್ಮಥನವೊಲ್ಗೋಚರಿಸಿದನು |
ಗರುವಾಯಿಯಲಿ ಗಜಗತಿಯಗಮನದಲಿ ||೨||

ಮೇಲೆ ಕೊಟ್ಟ ಪದ್ಯಗಳನ್ನು ಚೆನ್ನಾಗಿ ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಿರಿ.

೧ ಸಮಸ್ತಜನ ಬೆರಗಾಗುವಂಥದು ರಾಮನಲ್ಲಿ ಏನೇನು ಇತ್ತು ?

೨ ಸ್ವಯಂವರ ಮಂಟಪಕ್ಕೆ ಬರುವ ರಾಮನು ಬೇರೆ ಬೇರೆಯವರಿಗೆ ಹೇಗೆ ಹೇಗೆ ಕಂಡನು ? ಹಾಗೆ ಕಂಡನೆಂದು ಹೇಳಿದ ಮಾತುಗಳಲ್ಲಿ ಮೊದಲಿನವೆರಡು ಹೇಗೆ ಯೋಗ್ಯವಾಗಿವೆ ಎಂಬದನ್ನು ಹೇಳಿರಿ.

೩. ಆತನ ನಡಿಗೆಯಾವುದಕ್ಕೆ ಹೋಲಿಸಿದೆ? ಯಾಕೆ ?

೪ (ಅ) "ಭೂಮಿ" (ಬ) "ಅರಸು" ಈ ಅರ್ಥವನ್ನು ಹೇಳುವ ಮೇಲಿನ ಪದ್ಯದೊಳಗಿನ ಎಲ್ಲ ಶಬ್ದಗಳನ್ನು ಹೇಳಿರಿ.

೫ ಮಾಯಾನರನು ಎಂದರೇನು? ಆದು ಇಲ್ಲಿ ಹೇಗೆ ಯೋಗ್ಯವಾಗುವದು.

—೫—

ಹರಿಸಮಿಗೆ ನವಮಾಸ ತುಂಬಲು ।
ಶರಧಿಯೊಳು ಸಿರಿ ಜನಿಸಿದಂತಾ ।
ಅರಸಿಯುದರದಿ ಹೆಣ್ಣು ಮಗು ಹುಟ್ಟಿತು ಸುಲಗ್ನದಲಿ ॥
ನಗೆಮೊಗದ, ತೊಳಗುವ ಕಪೋಲದ ।
ಚಿಗುರನಣರಿಪ ಕರತಳದ, ಸಂ ।
ಪಗೆಯ ಪೋಲುವ ನಾಸಿಕದ ಪೊಗರುಗುವ ಚಂದುಟಿಯ ॥
ಬೊಗಸೆಗಣ್ಣಿನ, ತುಂಬಿಗುರುಳಿನ ।
ಮಗಳ ಚಲುವಿಕೆಯನು ನಿರೀಕ್ಷಿಸಿ ।
ಬಗೆಯೊಳಾನಂದಿಸರು ಜನನೀಜನಕರಡಿಗಡಿಗೆ ॥

ಮೇಲಿನ ಪದ್ಯವನ್ನು ಓದಿಕೊಂಡು ಕೆಳಗಿನ ಪ್ರಶ್ನಗಳಿಗೆ ಉತ್ತರ ಬರೆಯಿರಿ.

(ಅ) ಈ ಪದ್ಯಭಾಗದಲ್ಲಿ ಬಂದ ಉಪಮಾನೋಪಮೇಯಗಳನ್ನು ಹೇಳಿರಿ.

(ಬ) ಈ ಪದ್ಯಗಳು ಯಾವ ವೃತ್ತದವು ಅದರ ಲಕ್ಷಣಗಳು ಯಾವವು? ಮೊದಲಿನ ಎರಡು ಪಾದಗಳ ಪ್ರಸ್ತಾರ ಹಾಕಿರಿ.

(ಕ) ಜನನೀ ಜನಕರು ಮಗಳ ಚಲುವಿಕೆಯನ್ನು ಯಾವ

ರೀತಿಯಿಂದ ವರ್ಣಿಸಿದರು ?

(ಡ) ಹೆಣ್ಣು ಮಗುವು ಹುಟ್ಟಿದರೂ ಕೂಡಾ ಅವರು ಆನಂದ ಹೊಂದಿದ ಕಾರಣವೇನು ?

(ಇ) ಜೊಗಸೆಗಣ್ಣು, ಚಂಡುಟಿ, ನಗೆಮೊಗ, ಇವು ಯಾವ ಸಂಗತಿಗಳನ್ನು ವಿವರಿಸುವವು ?

—೬—

ಕೆಳಗಿನ ಪದ್ಯವನ್ನು ಓದಿ ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಒಡವೆಯುಳ್ಳರೆ ಮಡದಿ ಮಕ್ಕಳು ।
ಕಡು ಮಮತೆಯನು ಮಾಳ್ಪರಾತಗೆ ।
ಒಡತನಗಳಡಸಿದರೆ ಮೆಲ್ಲನೆ ಸದಿಲತೊಡಗುವರು ।
ಬಿಡದು ಕರು ಹಾಲಿರಲು ತಾಯನು ।
ಕಡೆಗೆ ಹೋಹುದು ಬತ್ತಿದರೆ; ತಾ ।
ಕೆಡುವ ಕಾಲಕ್ಕಾರಿಗಾರ್ರೈ ಮಗನೆ ಹೇಳೆಂದಾ ॥

(ಅಡಸಿದರೆ = ಕವಿದರೆ ಹೋಹುದು = ಹೋಗುವದು.)

(ಅ) ಈ ಕವಿತೆಯಲ್ಲಿ ಬುದ್ಧೀ ಮಾತು ಹೇಳುವವರು ಯಾರು ?

(ಆ) ಮಡದಿಮಕ್ಕಳು ನಮ್ಮಿಂದ ಯಾವಾಗ್ಗೆ ದೂರಾಗುವರು ?

(ಇ) ಕರು ತನ್ನ ತಾಯಿಯನ್ನು ಬಿಟ್ಟು ಯಾವಾಗ್ಗೆ ದೂರಾಗುವದು ?

(ಈ) ಈ ಕವಿತೆಯಿಂದ ಕಲಿಯತಕ್ಕ ಬುದ್ಧೀ ಮಾತು ಯಾವದು ?

—•—೭—•—

ಕಂಜಸಖನಲ್ಲಲ್ಲ ಬೆದರವಿ । ರಂಜದಿರಿಯಂಜದಿರಿ ಬರಿದೇ ।
ಗುಂಜಿ ಮಾಣಿಕವೆಂಬ ಮರುಳುಗಳಂತೆ ಮತಿಗೆಟ್ಟು ॥
ಅಂಜದಿರಿ ಸತ್ರಾಜಿತ್ರನು ವರ । ಕಂಜಸಖನಿತ್ತಮಳರತ್ನ ಸು ।
ರಂಜಿತನು ಬರುತಿಹನು ಎಂದನು ನಗುತ ಮುರವೈರಿ ॥

ಮೇಲಿನ ಪದ್ಯ ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕೊಡಿರಿ:—

೧ ಮುರವೈರಿಯು ಪುರಜನಕ್ಕೆ ಯಾವ ಮಾತುಗಳಿಂದ ಸಮಾಧಾನವನ್ನು ಹೇಳಿದನು ?

೨ ಪುರಜನಕ್ಕೆ ಯಾವ ಭ್ರಾಂತಿ ಬಂದಿತ್ತು ? ಏಕೆ ?

೩ ನಿಜ ಸ್ಥಿತಿ ಏನಿತ್ತು ?

೪ ಪುರಜನರು ಅಂಜಿದ್ದರಲ್ಲಿ ಹುರುಳಿಲ್ಲವೆಂದು ಮುರವೈರಿ ಏತರಿಂದ ತೋರಿಸಿದನು ?

—೮—

ಪಿಡಿಯೊಳ್ ತುಂಬಿರೆ ಪಂಕ ಮೇಲೆ ತೊಳೆಯಲ್ ತಾಂ ಶುದ್ಧನೇ ? ಗೃದನಂ ।
ಕಡುಪಾಪಂಗಳ ಮೀಯಲಾತ ಶುಚಿಯೇ ? ಕಾಕಾಳಿಗಳ್ ಮೀಯವೇ ॥
ಗುಡಪಾನಂಗಳೊಳದ್ದೆ ಬೇವಿನ ಫಲಂ ಸ್ವಾದಪ್ಪುದೇ ಲೋಕದೊಳ್ ॥
ಮಡಿ ತಾಂ ನಿರ್ಮಲ ಚಿತ್ತವೈ ಹರಹರಾ ಶ್ರೀ ಚೆನ್ನ ಸೋಮೇಶ್ವರಾ ॥ ೧ ॥

ಪಂಕ, ಕೆಸರು; ಮೀಯು, ಸ್ನಾನಮಾಡು; ಕಾಕಾಳಿ (ಕಾಕ+ಅಳಿ), ಕಾಗೆಗಳ ಸಮೂಹ; ಗುಡಪಾನ, ಬೆಲ್ಲದ

ಪಾನಕ; ಅದ್ದೆ, ಎದ್ದಿದರೆ; ಸ್ವಾದು, ರುಚಿಕರ, ಸವಿ.

ಪ್ರಶ್ನೆಗಳು:— (೧) ಶುದ್ಧತೆ ಎಂದರೇನು? (೨) ಶುದ್ಧತೆಯು ಏತರಿಂದ ಬರುತ್ತದೆ? (೩) "ನೀರೊಳಗೆ ನಿಲ್ಲುವದರಿಂದ ಮುಕ್ತಿಯಾಗುತ್ತಿದ್ದರೆ ಜಲಚರಗಳಿಗೆ ಮುಕ್ತಿಯಾಗಬೇಕು." ಎಂಬ ಅನುರೂಪವಾದ ಮಾತು ಇಲ್ಲಿ ಹೇಗೆ ಸಿದ್ಧಮಾಡಲ್ಪಟ್ಟಿದೆ? (೪) 'ಜೀವಿನ ಫಲಂ ಸ್ವಾದಪ್ಪುದೇ ಲೋಕದೊಳ್' ಇವರಲ್ಲಿ ಅಡಕವಾಗಿರುವ ಅರ್ಥವನ್ನು ನಿಮ್ಮ ಮಾತಿನಲ್ಲಿ ವಿವರಿಸಿರಿ. (೫) ಈ ಪದ್ಯದಲ್ಲಿ ಕಂಡುಬರುವ ಅಲಂಕಾರಗಳಾವವು? (೬) 'ಮಡಿ' ಎಂದರೇನು? (೭) 'ಚಿತ್ತಶುದ್ಧಿಯು ಮಡಿಯುಗುಟ್ಟು' ಇದರ ವಿಷಯವಾಗಿ ೫ ಸಾಲುಗಳನ್ನು ಒರೆಯಿರಿ. (೮) ಮೇಲಿನ ಪದ್ಯದ ಭಾವವನ್ನು ಮೂರು ಮಾತುಗಳಲ್ಲಿ ಬರೆಯಿರಿ.

— ೯ —

ಮನಸ್ಸಿಗೆ ಉಪದೇಶ.

ಮೋಸದಿ ಜೀವಿಯ ಘಾಸಿಯ ಗೈದದು
ಕಾಶಿಗೆ ಹೋದರೆ ಹೋದೀತೇ ॥
ಭಾಷೆಯ ಕೊಟ್ಟು ನಿರಾಶೆಯ ಪಡಿಸಲು
ಮೋಸವ ಮಾಡದೇ ಬಿಟ್ಟೀತೇ ॥೧॥

ಘಾಸಿ, ಉಪದ್ರವ;

ನ್ಯಾಯವ ಬಿಟ್ಟನ್ಯಾಯವ ಪೇಳುವ।
ನಾಯಿಗೆ ನರಕವು ತಪ್ಪೀತೇ ॥
ತಾಯ್ತಂದೆಗಳನು ನೋಯಿಸಿದಾತ-।
ನ್ಯಾಯಿಗೆ ಮುಕುತಿಯು ದೊರಕೀತೇ ॥೨॥

ಬಾಯಿಯ ಕೊಬ್ಬಿಂ ಬೈಯುವ ಮನುಜಗೆ ।
ಗಾಯವು ತಾಗದೆ ಬಿಟ್ಟೀತೇ ।
ಮಾಯೆಯ ನುಡಿ ಸಂಚಯಿಸಿದ ಮನುಜಗೆ ।
ಕಾಯದ ಕಷ್ಟವು ತೊಲಗೀತೇ ॥೩॥

ಕೊಬ್ಬು, ಸೊಕ್ಕು; ಮಾಯೆ, ಮೋಸ; ಸಂಚಯಿಸು, ಕೂಡುಹಾಕು; ಕಾಯ, ಶರೀರ;

ಸಾಧುಸುಜನರನು ಬಾಧಿಸಿದಾಪದ ।
ವಾದಿಗೆ ದೋಷವು ತಪ್ಪೀತೇ ॥
ಬಾಧಿಸಿ ಬಡವರ ಸಾಧನವೊಯ್ವಗೆ ।
ವ್ಯಾಧಿಯ ಕೊಟ್ಲೆಯು ಬಿಟ್ಟೀತೇ ॥೪॥

ಕೊಟ್ಲೆ, ಉಪದ್ರವ;

ಪ್ರಶ್ನೆಗಳು:—ಮೇಲಿನ ಪದ್ಯಗಳ ಸರಳಾನುವಾದವನ್ನು ಬರೆಯಿರಿ. (೨) ಕಾಶಿಗೆ ಹೋದರೂ ಹೋಗುವದಿಲ್ಲ ಎಂದು ಹೇಳುವುದರ ಅರ್ಥವೇನು? (೩) 'ನಾಯಿ' ಯು ಯಾರು? ಅವನಿಗೆ ನರಕವು ತಪ್ಪುವದಿಲ್ಲ ಯಾಕೆ? (೪) ಯಾರು ಯಾತು ಮುಕ್ತಿಯನ್ನು ದೊರಕಿಸಲು ಅನಧಿಕಾರಿಗಳು? (೫) 'ಬಾಯಿಯ ಕೊಬ್ಬಿಂ' ಅಂದರೇನು? (೬) ಮಾಯೆಯ ನುಡಿ, ಕಾಯದ ಕಷ್ಟ, ವ್ಯಾಧಿಯ ಕೊಟ್ಲೆ, ಇವುಗಳನ್ನು ವಿವರಿಸಿರಿ. (೭) ಕವಿಯು ಯಾವ ರೀತಿಯಿಂದ ಮಾತಿನ ಜೋರನ್ನು ಉಂಟು ಮಾಡಿರುವನು?

—೧೦—

ಬುದ್ಧಿಯ ಮಾತು.

ಶಂಟರು ಬಂಟರು ದುಡ್ಡಿನ ।

ಗಂಟೆರುವನಕೆಲ್ಲ ಹೇಳಿದಂದದಿ ನಡೆವರ್ ।
ಗಂಟೆಲ್ಲ ತೀರ್ದ ಮರುದಿನ ।
ನಂಟರೆ ಗಂಟಲಿಗೆ ಗಾಣ ಕವಿಕುಲರತ್ನಾ ॥ ೧ ॥

ಬಂಟರು, ಸೇವಕರು; ಗಂಟಲಿಗೆ ಗಾಣ, ಜೀವಕ್ಕೆ ಪಾಶ.

ಬಿಸಿಲೊಳಗೆ ಬಿದ್ದ ಮೊಸಳೆಯ ।
ನಸುವಳಿಯದ ಹಾಗೆ ತಂದು ನೀರೊಳೆ ಬಿಡಲಾ ॥
ಮೊಸಳೆ ಮರುಳವನ ನುಂಗಿತು ।
ಪಿಸುಣಂಗುಪಕಾರ ಮಾಡಿ ತಪ್ಪದು ಕೇಡು ॥ ೨ ॥

ಅಸುವು, ಪ್ರಾಣವು; ಅಳಿ, ಹೋಗು; ಪಿಸುಣಂಗೆ, ನೀಚನಿಗೆ

ಬಾಳಿಯ ಗಿಡದಡಿಯಲಿ ಹೆ ।
ಜ್ಜಾಲಿಯ ಮರ ತಾನು ಹುಟ್ಟಿ ಬೆಳೆಯಲು ಮತ್ತಂ ॥
ಖೂಳರು ಹೆಚ್ಚಿದ ಠಾವಿಲಿ ।
ಬಾಳುವನಾಳುಗಬಹುದೆ ? ಸರಸ ಕವೀಂದ್ರಾ ॥ ೩ ॥

ಖೂಳ, ದುಷ್ಟ; ಬಾಳುವನು, ಇರುವವನು.

ಅರ್ಥದ ಮರ್ಮವನರಿಯದೆ ।
ವ್ಯರ್ಥವು ತಾಂ ಕಲಿತರೇನು ಪದಪದ್ಯಂಗಳ್ ॥
ಮುತ್ತಂ-ಹವಳ-ಹಣಂಗಳ ।
ಕತ್ತೆಯು ತಾ ಹೊತ್ತರೇನು ? ಬೆಲೆಯರಿದಪುದೇ ? ॥೪॥

ಮರ್ಮ, ಗುಟ್ಟು; ಅರಿದಪುದೇ, ತಿಳಿಯುವದೇ.

ಪ್ರಶ್ನೆಗಳು:—(೧) ಮೇಲಿನ ಪದ್ಯಗಳ ಭಾವಾರ್ಥವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ. (೨) ಉಪಕಾರ ಮಾಡಿಸಿಕೊಳ್ಳಲು ಯಾರು ಅಯೋಗ್ಯರು ? (೩) ಮೇಲಿನ ಪದ್ಯಗಳಲ್ಲಿ ಬಂದ ಹೋಲಿಕೆಗಳು ಯಾವವು ? (೪) ದುರ್ಜನರ ಸಂಗತಿಯಿಂದ

ಯಾವ ಫಲವು ಉಂಟಾಗುವದು? (೫) ವಿರುದ್ಧಾರ್ಥಕ ಶಬ್ದಗಳನ್ನು ಆರಿಸಿ ಬರೆಯಿರಿ.

— ೧೧ —

ಕೆಳಗೆ ಕೊಟ್ಟ ವಿಷಯವನ್ನು ಓದಿ ಅದರ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ:—

ನಮ್ಮ ಸಮಕಾಲೀನ ಸಾಹಿತ್ಯದಲ್ಲಿ ಸಣ್ಣ ಕತೆ, ಭಾವಗೀತೆ, ಕಾದಂಬರಿ ಮೊದಲಾದ ಲಲಿತಸಾಹಿತ್ಯ ಅಥವಾ ರಮ್ಯಸಾಹಿತ್ಯ ದಿನದಿನಕ್ಕೆ ಬೆಳೆಯುತ್ತಿರುವಂತೆ ಅದೇ ಪ್ರಮಾಣದಲ್ಲಿ ಜ್ಞಾನದಾಯಕ ಸಾಹಿತ್ಯವಾಗಲಿ ಪುರೋಗಾಮಿ ಸಾಹಿತ್ಯವಾಗಲಿ ಬೆಳೆದು ಬರುತ್ತಿಲ್ಲ. ಒತ್ತಾಯ ಶಿಕ್ಷಣದ ಕಡೆಗೂ ವಯಸ್ಕರ ವಿದ್ಯಾಭ್ಯಾಸದ ಕಡೆಗೂ ಜನರ ದೃಷ್ಟಿ ತಿರುಗುತ್ತಿರುವ ಈಗಿನ ಕಾಲದ ಓದು ಬರಹಗಳಿಂದ ತಮ್ಮ ಜ್ಞಾನದಾಹವನ್ನು ನೀಗಿಸಿಕೊಳ್ಳಬೇಕೆಂದು ತವಕಿಸುತ್ತಿರುವ ಪಾಮರರಿಗೋಸ್ಕರವಾಗಿಯೇ ಶಾಸ್ತ್ರೀಯವಾದ ವಿಷಯಗಳನ್ನು ಸುಲಭವಾದ ರೀತಿಯಲ್ಲಿ ತಿಳಿಸುವ ಗ್ರಂಥಗಳು ನಮಗೆ ಹೇರಳವಾಗಿ ಬೇಕಾಗಿವೆ. ಹಳೆಯ ಮತ್ತು ಹೊಸ ಸಾಹಿತ್ಯಗಳ ಗುಣದೋಷಗಳನ್ನು ಚರ್ಚಿಸುವ ವಿಮರ್ಶಾತ್ಮಕ ಗ್ರಂಥಗಳೂ ವೈಜ್ಞಾನಿಕ ವಿಷಯಗಳನ್ನು ಕುರಿತ ಗ್ರಂಥಗಳೂ ಚರಿತ್ರೆ, ರಾಜನೀತಿ, ಸಮಾಜಶಾಸ್ತ್ರ ಮುಂತಾದ ವಿಷಯಗಳ ಗ್ರಂಥಗಳೂ ಹೆಚ್ಚಾಗಿ ಬೇಕಾಗಿವೆ. ಈಗ ನಡೆದಿರುವ ಕೆಲಸ ತುಂಗೆಯ ಮಳಲಕಣವಾದರೆ ಮುಂದೆ ಮಾಡಬೇಕಾಗಿರುವ ಕೆಲಸವು ಹಿಮಾಲಯದಷ್ಟಿದೆ. ಇತ್ತ ಕಡೆಗೆ ನಮ್ಮ ನಾಡಿನ ಪ್ರಗತಿಪರ ಬರಹಗಾರರು ತಮ್ಮ ಲಕ್ಷ್ಯವನ್ನು ತಿರುಗಿಸಬೇಕು.

ಪ್ರಶ್ನೆಗಳು:—(೧) ಬಹು ಜನರು ವಿವಿಧ ಗ್ರಂಥಗಳನ್ನು ಯಾಕೆ ಓದಬಯಸುವರು? (೨) ಅವರ ಸಲುವಾಗಿ ಬರೆದ ಗ್ರಂಥಗಳ ಭಾಷೆ ಹೇಗಿರಬೇಕು? (೩) ಪುರೋಗಾಮಿ ಸಾಹಿತ್ಯದ ಲಕ್ಷಣಗಳೇನು? ಲಲಿತಸಾಹಿತ್ಯದಲ್ಲಿ ಸೇರಿಪುವೆಂದು ಹೇಳುವ ವಿಷಯಗಳಲ್ಲಿರುವ ಪ್ರಸಿದ್ಧವಾದ ಒಂದೊಂದು ಗ್ರಂಥದ ಹೆಸರನ್ನು ವಿಷಯಾನುಸಾರವಾಗಿ ಹೇಳಿರಿ (೪) ಈ ಕಾಲದಲ್ಲಿರುವ ಕನ್ನಡದ ಜ್ಞಾನದಾಯಕ ಸಾಹಿತ್ಯದಲ್ಲಿ ಯಾವ ಯಾವ ವಿಷಯಗಳನ್ನು ಕುರಿತು ಗ್ರಂಥಗಳ ಕೊರತೆ ಹೆಚ್ಚಾಗಿದೆ?

—೧೨—

ಈ ಕವನವನ್ನು ಚೆನ್ನಾಗಿ ಮನನ ಮಾಡಿ ಈ ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:—

ಸೊಕ್ಕಿನಲಿ ತಲೆಯೆತ್ತಿ ಜೊತೆಯವರ ಕೂಟದಲಿ
ನಾವು ಸಮ ನಿಮಗೆಂದು ನುಡಿವ ಬಲವಿಲ್ಲ!
ಮಿಕ್ಕವರು ಕಸಗಣಿಸಿ ನೂಕಿದಾ ಕಡೆ ಬಿದ್ದು,
ಯಾವ ಮಂಕೋ ಕವಿದು ಹುದುಗಿರುವೆವಲ್ಲಾ?
ರೊಕ್ಕ ಕೈಯೊಳಗಿಲ್ಲ ಹುರುಡು ಮೈಯೊಳಗಿಲ್ಲ.
ಹೆಮ್ಮೆಯೊಂದನು ನೆಚ್ಚಿ ದೆಸೆ ಗೆಟ್ಟೆವಲ್ಲ!
ಅಕ್ಕತಂಗಿಯರೆಲ್ಲ ಮುಂದು ಮುಂದಾಗಿರಲು,
ನಮ್ಮ ತಾಯೊಬ್ಬಳೇ ಸೊರಗಿರುವಳಲ್ಲ!
ಅಮ್ಮನನು ಕೈ ಬಿಡದೆ ಇನ್ನು ಮೆರೆಸುವೆವೆ?
ಹಿರಿಯ ಹೆಸರನು ತಿರುಗಿ ಗಳಿಸಿಕೊಳ್ಳುವೆವೆ?
ಸರಿಯವರ ತಲೆ ಮೆಟ್ಟಿ ಮುಂದೆ ನಿಲ್ಲುವೆವೆ?

ನೆಮ್ಮದಿಯ ಬೆಳಕಿನಲಿ ನಾವು ಬಾಳುವೆವೆ ?

ಪ್ರಶ್ನೆಗಳು:—(೧) ನಮಗೆ ಹೇಗೆ ಇರುವ ಬಲವಿಲ್ಲ? (೨) ನಮ್ಮ ಈಗಿನ ಬಾಳು ಎಂತಹ ಬಾಳು? (೩) ನಾವು ದೆಸೆಗೆಡುವ ಕಾರಣವೇನು? ನಾವು ದೆಶೆಗೆಟ್ಟದರ ಪರಿಣಾಮವೇನು? (೪) ನಮ್ಮ ಹಿರಿಯ ಹೆಸರು ಯಾವುದು? (೫) ಅದನ್ನು ತಿರುಗಿ ಗಳಿಸಿದರೆ ನಾವು ಯಾವ ಸ್ಥಿತಿಯಲ್ಲಿ ನಿಲ್ಲಬಹುದು? (೬) ಕವಿಯು ಕೊನೆಯ ಪದ್ಯದಲ್ಲಿ ಪ್ರಶ್ನೆ ಕೇಳುವುದರಿಂದ ಅವನ ಮನೋಭಾವನೆಯು ಏನಿರಬಹುದು? (೭) ಈ ಕವನದ ತಲೆ ಬರಹವೇನಿರಬೇಕು?

—೧೩—

(ಅ) ಮನುಷ್ಯನು ಸುಖಕ್ಕಾಗಿ ಹಾತೊರೆಯುತ್ತಾನೆ. ಸುಖವನ್ನೂ ಸ್ವಾಸ್ಥ್ಯವನ್ನೂ ಪಡೆಯಲು ಹೆಣ್ಣು-ಗಂಡು ಕೂಡಿಯೇ ಇಚ್ಛಿಸುತ್ತವೆ. ಸುಖವೇನು ಬರಿಯ ಸಂಪತ್ತಿನಲ್ಲಿದೆಯೆ? ಸಂಪತ್ತನ್ನು ಸುಖಮಯವಾಗಿ ವಿನಿಯೋಗಿಸುವದರಲ್ಲಿದೆ. ಜೀವನವನ್ನು ಹೆಚ್ಚು ಹೆಚ್ಚಾಗಿ ಸುಂದರವಾಗಿ ಮಾಡುವದರಲ್ಲಿದೆ. ಇಂಥ ಸೌಂದರ್ಯವನ್ನು ದೊರಕಿಸಲು ಬುದ್ಧಿವಂತಿಕೆಯು ಬೇಕು. ಅದು ನಮ್ಮ ಹೆಂಗೆಳೆಯರಲ್ಲಿ ಹೆಚ್ಚಾದ ಹಾಗೆ ಜೀವನ ಸೌಖ್ಯವು ಹೆಚ್ಚುವದು. ಮನುಷ್ಯನಿಗೆ ನಾಗರಿಕತೆಯ ಆನಂದವೆಲ್ಲ ದೊರೆಯಬೇಕಾದರೆ ಗಂಡಸು-ಹೆಂಗಸರು ಕೂಡಿಯೇ ವಿದ್ಯೆಯನ್ನು ಗಳಿಸಬೇಕು.

ಸಮಾಜ-ಸ್ವಾಸ್ಥ್ಯವು ನಮಗೆ ಬೇಕಾಗಿದ್ದರೆ, ದೇಶಸ್ವಾತಂತ್ರ್ಯವು ನಮಗೆ ಬೇಕಾಗಿದ್ದರೆ ಸ್ತ್ರೀಶಿಕ್ಷಣವಿಲ್ಲದೆ ಇವು ಸಿಕ್ಕ

ಬಹುದೇ ? ಸಮಾಜದ ಅರ್ಧಾಂಗವು ಹೆಣ್ಣುಮಕ್ಕಳದು. ಇವರು ವಿದ್ಯಾವಂತರಾಗದಿರಲು ಅರ್ಧಾಂಗವಾಯುವಿನ ಬೇನೆ ಯಿದ್ದಂತೆ ಸಮಾಜವು ಕಾಂತಿಹೀನವಾಗುವದು. ದೇಶದ ಭವಿತವ್ಯತೆಯು ಬೆಳೆಯುತ್ತಿರುವದು ತಾಯ್ತನದ ಉಡಿಯಲ್ಲಿ. ತಾಯಿ ಚಿಕ್ಕಂದಿನಲ್ಲಿ ಕಲಿಸಿದ ಪಾಠವು ಸಾಯುವ ವರೆಗೆ ನೆಲೆಯೂರುವದು. ಇಂಥ ಪಾಠಗಳನ್ನು ಕಲಿಸುವ ಯೋಗ್ಯತೆಯನ್ನು ನಾವು ನಮ್ಮ ಹೆಣ್ಣುಮಕ್ಕಳಿಗೆ ಕೊಡಬೇಕು. ಗಂಡಂದಿರನ್ನು ಅದರಂತೆ ನಡೆಯಿಸುವ ಭಾರವನ್ನು ಹೊರಲು ಸತಿಯರಿಗೂ ವಿದ್ಯಾವಂತಿಕೆಯು ಬೇಕು. ಇದಿಲ್ಲದೆ ಸಮಾಜದಲ್ಲಿ ಶಾಂತಿಯು ನೆಲೆಗೊಳ್ಳುವದೆಂತು !!

ಮೇಲ್ಕಂಡ ವಾಕ್ಯವೃಂದವನ್ನು ಸರಿಯಾಗಿ ಓದಿ, ಅವುಗಳ ಸಾರಾಂಶವನ್ನು ಒಂದು-ಮೂರನೆಯಂಶಕ್ಕೆ ಮೀರದಂತೆ ನಿಮ್ಮ ಮಾತುಗಳಲ್ಲಿ ಬರೆಯಿರಿ.

[ಬ] ಕೆಳಗೆ ಕೊಟ್ಟ ಪ್ರಶ್ನೆಗಳಲ್ಲಿ ಬೇಕಾದ ಐದು ಪ್ರಶ್ನೆಗಳಿಗೆ ಉತ್ತರ ಬರೆಯಿರಿ:—

[೧] ಸುಖವು ಸಂಪತ್ತಿನಲ್ಲಿಯಲ್ಲದೆ ಬೇರೆ ಯಾತರಲ್ಲಿದೆ ?

[೨] ನಾಗರಿಕತೆಯ ಆನಂದವೆಂದರೇನು ?

[೩] ದೇಶದ ಸ್ವಾತಂತ್ರ್ಯಕ್ಕೆ ಮೂಲವು ಯಾವುದು ?

[೪] ಸಮಾಜವು ಹೇಗೆ ಮತ್ತು ಯಾವಾಗ ಕಾಂತಿಹೀನವಾಗುವದು ?

[೫] ಮೇಲಿನ ಎರಡೂ ವಾಕ್ಯವೃಂದಗಳಿಗೆ ಸರಿಹೋಗುವ ಒಂದು ತಲೆಬರಹವನ್ನು ಕೊಡಿರಿ.

[೬] ಅವುಗಳಲ್ಲಿ ಕೆಳಗೆ ಗೆರೆಹೊಡೆದ ಭಾಗಗಳ ಅರ್ಥವನ್ನು ಬರೆಯಿರಿ.

[೭] ಕೂಡಿಯೇ, ಬರಿಯ, ಜೀವನಸೌಖ್ಯ, ಭವಿತವ್ಯತೆ, ಆದರಂತೆ,—ಇವುಗಳ ಅರ್ಥವನ್ನು ಇವುಗಳಿಗಿದ್ದ ಸಂಬಂಧಾನುಸಾರವಾಗಿ ಕೊಡಿರಿ.

—೧೪—

ಕೆಳಗಿನ ಪದ್ಯಗಳನ್ನು ಓದಿ, ಅವುಗಳ ಕೆಳಗೆ ಕೊಟ್ಟ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:—

"ಕಳೆದು ಹೋಯಿತು ಹಗಲು!" ಎನ್ನುತ
ಕಳೆವಿರಲು ಕಣ್ಣೀರ ಕಪ್ಪದಿ |
ಅಳಲಿದರೆ ತಾ ಮರಳಿ ಬರ್ಪುದೆ ಕಳೆದ ದಿವಸವದು ? ||
ಕಳೆದು ಕೊಳ್ಳುವೆ ಮತ್ತೆ ರಾತ್ರಿಯ |
ಬೆಳಗುತಿಹ ನಕ್ಷತ್ರಪುಂಜದ |
ಬೆಳಕಸಹ ನೀನಿದನು ತಿಳಿದಿಹ ಮಾನವೋತ್ತಮನೆ ||೧||
ನೋಡುವರ ದೃಷ್ಟಿಯಲಿ ಗುಣದೋಷವಿದ್ದಂತೆ |
ಮಾಡುವರು ನಿನ್ನ ಗುಣದೋಷಗಳ ಕಲ್ಪನೆಯು |
ನಾಡುವರು ತಮಗೆ ತಿಳಿದಂತೆಯೇ ನೀನವರ ನುತಿನಿಂದೆಗಳನು ಗಣಿಸೆ ||
ನಾಡಿನಲಿ ಬಾಳಿ ಬದುಕುವದಸಾಧ್ಯವು ಕಂದ |
ನೋಡದಿರು ಕಣ್ಣೆತ್ತಿ, ಕೇಳದಿರು ಕಿವಿಯೆತ್ತಿ |
ಮಾಡುತಿರು ಸತ್ಕಾರ್ಯಗಳನು ನೀಂ ಜಗದೊಡೆಯ ಶ್ರೀಹರಿಯ ದಾಸನೆಂದು || ೨ ||

ಪ್ರಶ್ನೆಗಳು:— [೧] ಮೊದಲನೇ ಪದ್ಯದಲ್ಲಿ ಕವಿಯು

ಹೇಳಿದ ಬುದ್ಧಿವಾದವಾವುದು ? ರೂಢಿಯಲ್ಲಿ ಅದು ಎಷ್ಟರ ಮಟ್ಟಿಗೆ ಸಾಧ್ಯವಾದದ್ದು ಕಂಡುಬರುತ್ತದೆ ?

[೨] ಈ ಪದ್ಯದಲ್ಲಿ ಹೇಳಿದ ಬುದ್ಧಿಮಾರ್ಗವನ್ನು ಯಾವ ದೃಷ್ಟಾಂತಗಳಿಂದ ತಿಳಿಸಿ ಹೇಳಿದ್ದಾನೆ ?

[೩] ಎರಡನೇ ಪದ್ಯದಲ್ಲಿ ಕವಿಯು ಸಮಾಜದಲ್ಲಿಯ ಜನರ ಯಾವ ತಿಳುವಳಿಕೆಯ ದೋಷವನ್ನು ತೋರಿಸಿ ಕೊಟ್ಟಿದ್ದಾನೆ ?

[೪] ಅದರ ಪರಿಹಾರೋಪಾಯವು ಯಾವುದೆಂದು ಸೂಚಿಸಿದ್ದಾನೆ ?

[೫] ಕೊಟ್ಟ ಎರಡು ಪದ್ಯಗಳಲ್ಲಿ ಬೇಕಾದ ಒಂದಕ್ಕೆ ತಲೆಬರಹವನ್ನು ಕೊಡಿರಿ.

--೧೫--

೪೧ ನೇ ಪುಟದ ಮೇಲಿನ ಕವನವನ್ನು ಓದಿ ಕೆಳಗೆ ಕೊಟ್ಟ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:—

[೧] ಕನ್ನಡಿಗರ ಕೀಳು ಸ್ಥಿತಿಗಳಲ್ಲಿ ಮೂರನ್ನು ಹೇಳಿರಿ.

[೨] ಕನ್ನಡ ತಾಯಿಯ ಯಾವ ಅಕ್ಕತಂಗಿಯರು ಆಕೆಗಿಂತ ಮುಂದಾಗಿದ್ದಾರೆ ? ಇಬ್ಬರ ಹೆಸರನ್ನು ಹೇಳಿರಿ. ಅವರು ಮುಂದಾಗಿರುವರು ಎಂದರೇನು ? ವಿವರಿಸಿ ಹೇಳಿರಿ.

[೩] ಕನ್ನಡದ ಸ್ಥಿತಿ ಮೊದಲು ಹೇಗೆ ಇತ್ತು ?

[೪] ಕನ್ನಡಿಗನು ಈಗ ಯಾವ ಯಾವುದನ್ನು ಆಶಿಸುತ್ತಾನೆ ?

[೫] ಕನ್ನಡವು ಮುಂದೆ ಬಂದರೆ ಆಗುವ ಲಾಭವು ಯಾವುದು ?

—•—೧೬—•—

[ರಾಮನು ದಂಡಕಾರಣ್ಯಕ್ಕೆ ಬಂದಾಗ ಒಬ್ಬ ಶಬರಿಯು (ಬೇಡರ ಹೆಂಗಸು) ಆವನ ಬರುವಿಕೆಯನ್ನು ಕಾದಿರುವಳು]

ಕಾದಿರುವಳು ಶಬರಿ, ರಾಮ ಬರುವನೆಂದು, ತನ್ನ ಪೂಜೆಯ
ಕೊಳುವನೆಂದು ॥
ವನವನವ ಸುತ್ತಿ ಸುಳಿದು, ಮರಮರವನು ಅಲೆದು ತಿರಿದು ।
ಬಿರಿವೂಗಳನು ಆಯ್ದು ತಂದು, ಹಸಿವಣ್ಗಳನು ಆಯ್ದು ತಂದು ॥
ಕೊಳದಲ್ಲಿ ಮುಳುಗಿ ಮಿಂದು, ಬಿಳಿ ಸಾರ ಮಡಿಯನುಟ್ಟು ।
ಎಳೆಗಾಳಿ ಸುಳಿಯುತಿರಲು, ಕಿವಿಯೆತ್ತಿ ಆಲಿಸುವಳು ।
ಎಲೆ ಚಲಿಸೆ ಗಾಳಿಯಲಿ, ನಡೆಯ ಸಪ್ಪಳೆಂದು ಬಗೆದು ।
ದೂರಕ್ಕೆ ನೋಳ್ಪೆನೆಂದು ಮರವೇರಿ ದಿಟ್ಟಿಸುವಳು ।
ಗಿರಿಯ ಮೇಲಕೆ ಪೋಗಿ ಕೈಯ ಮರೆಮಾಡಿ ನೋಡುತಿಹಳು ॥
ಬಾ ರಾಮ ರಾಮ ಎಂದು ಬರುತಿಹನು ಇಹನು ಎಂದು ।
ಹಗಲಿರುಳು ಚಿಂತಿಸುತಿಹಳು ಕಳೆದಿಹಳು ವರುಷ ಹಲವು ॥

ಮೇಲಿನ ಪದ್ಯವನ್ನು ಓದಿಕೊಂಡು ಕೆಳಗಿನ ಪ್ರಶ್ನಗಳಿಗೆ ಉತ್ತರ ಬರೆಯಿರಿ.

[೧] ಶಬರಿಯು, ರಾಮನು ಯಾರೆಂದು ತಿಳಿದಿರುವಳು?

[೨] ಆತನಿಗಾಗಿ ಆಕೆ ಯಾವ ಯಾವ ಪದಾರ್ಥಗಳನ್ನು ಕೂಡಿಸಿಡಳು?

[೩] ರಾಮನನ್ನು ನೋಡುವಲ್ಲಿ ಆಕೆ ಆತುರಳಾಗಿರುವಳೆಂಬದನ್ನು ತೋರಿಸುವ ಮಾತುಗಳನ್ನು ಹೇಳಿರಿ.

[೪] ಆಕೆ ನೋಡುವಾಗ ಕೈಮರೆ ಮಾಡಿದ್ದು ಏಕೆ?

[೫] ಶಬರಿಯು ಇದುವರೆಗೆ ಯಾವಚಿಂತೆಯಲ್ಲಿದ್ದಳು?

—೧೭—

ಕೆಳಗೆ ಬರೆದ ವಿಷಯವನ್ನು ಸಂಕ್ಷೇಪ ಮಾಡಿ ನಿಮ್ಮದೇ ಶೈಲಿಯಲ್ಲಿ ಬರೆಯಿರಿ:—

ನಾವು ಯಾರು ಎಂಬದನ್ನು ಅರಿಯಬೇಕು. ನಾವು ಭಾರತೀಯರು; ಕನ್ನಡಿಗರು ಭಾರತೀಯರು ಎಂಬ ಹೆಮ್ಮೆ ಬರಬೇಕು. ನಮ್ಮ ಗತವೈಭವವನ್ನು ಸ್ಮರಿಸಿ ಆ ನಂದಿಹೋದ ಜ್ಯೋತಿ ಬೆಳಗುವದಕ್ಕೆ ಪ್ರಯತ್ನ ನಡೆಸಬೇಕು. ನನ್ನ ಸೋದರಿಯರ ಭಾಗ ಇದರಲ್ಲಿ ಏನೂ ಕಡಿಮೆಯಿಲ್ಲ. ಪದವೀಧರರ ದೃಷ್ಟಿ ಈ ಕಡೆಗೆ ಬೀಳಬೇಕು. ಸಂಸ್ಕೃತಿಯ ಮೇಲೆ ಮಮತೆ ಬೆಳೆಯಬೇಕು. ಆ ಕ್ಷೇತ್ರವನ್ನಾರಿಸಿಕೊಂಡು ಕಾರ್ಯಮಗ್ನರಾಗಬೇಕು. ದೇಶದ ಉನ್ನತಿಗೆ ರಾಷ್ಟ್ರನಿರ್ಮಾಣ ಕಾರ್ಯಕ್ಕೆ ಹಿಂದೆಗೆಯದೆ ಮುನ್ನುಗ್ಗಬೇಕು.

ಕಲೆ ಅನೇಕ ವಿಧವಾಗಿದೆ. ನೈಪುಣ್ಯತೆಯಿಂದ ಕೂಡಿದೆ. ಸಾಹಿತ್ಯಕಲೆಯಲ್ಲಿ ಪ್ರವೀಣರಾಗಬೇಕು. ಸಂಕಲ್ಪಸಿದ್ಧರಾಗಬೇಕು. ಮುಂದಿನ ಜನಾಂಗವನ್ನು ಸಿದ್ಧಗೊಳಿಸಲು ಸಿದ್ಧರಾಗಬೇಕು. ಈ ಆಡಂಬರದ ಜೀವನದಿಂದ ಸರಳಜೀವನಕಿಳಿಯಬೇಕು. ಅಂತಶ್ಶಕ್ತಿಯನ್ನು ವಿಕಸಿತಗೊಳಿಸಬೇಕು. ಆದರಿಂದ ಸ್ಥಿರವಾದ ವ್ಯವಸ್ಥೆಯು ನಮ್ಮ ದೇಶಕ್ಕೆ ಚಿರಸ್ಥಾಯಿಯಾಗಿ ನಿಲ್ಲುವಂತಾಗುತ್ತದೆ.

—೧೮—

ಈ ಕವನವನ್ನು ಚೆನ್ನಾಗಿ ಮನನ ಮಾಡಿ ಮುಂದೆ ಕೊಟ್ಟ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:—

ಮೊಲೆ.

ನನ್ನ ಬಾಲಗೋಪಾಲನ ಗೋದಲೆಗಳವ್ವಾ ಇವು;

ಕಪಿಲೆ ಕಾಮಧೇನುಗಳು ಕಟ್ಟಿಹವಿಲ್ಲಿ.

ಅವನಿಗೇನು ಕಡಿಮೆ ?"

ಗಂಗೆಗೆ ಉಣಿಸುವ ಹಿಮವತಿಯ
ತುಂಗ ಶಿಖರದ ಮಾವರಿಗಳಿವು.

ಅವನಿಗೇನು ಕಡಿಮೆ ?"

ವಾತ್ಸಲ್ಯದ ವಿಜಯಯಾತ್ರೆಯಲ್ಲಿ
ನನ್ನ ಕಂದನೂದುವ ಅವಳಿ ಶಂಖಗಳಿವು.

ಅವನಿಗೇನು ಕಡಿಮೆ ?"

ಎಲ್ಲರ ತಾಯಿಯಾದ ನಲ್ಲಮ್ಮನ ಗುಡಿಯ
ಜೋಡು ಕಳಸಗಳಿವು....................

ಅವನಿಗೇನು ಕಡಿಮೆ ?"

(ಅ) ಮೊದಲಿನ ಸಾಲಿನ ಅರ್ಥ ತಿಳಿಸಿ ಹೇಳಿರಿ.

(ಆ) ಮೊಲೆಗಳನ್ನು (i) ಕಪಿಲೆ ಕಾಮಧೇನುಗಳಿಗೆ (ii) ಅವಳಿ ಶಂಖಗಳಿಗೆ (iii) ಜೋಡು ಕಲಶಗಳಿಗೆ ಹೋಲಿಸಿ ಕವಿಯು ಸೂಚಿಸಿದ ಅರ್ಥಗಳನ್ನೆಲ್ಲ ಸ್ಪಷ್ಟೀಕರಿಸಿರಿ.

(ಇ) 'ನಲ್ಲಮ್ಮ'ನಾರು ? ಅವಳು ಎಲ್ಲರ ತಾಯಿ ಹೇಗೆ ?

(ಈ) ಮೊಲೆಗಳು ದೊಡ್ಡವಿದ್ದವು, ಎಂದು ಯಾವ ಮಾತುಗಳಿಂದ ಕವಿಯು ಸೂಚಿಸಿದ್ದಾನೆ ?

--೧೯--

ಬಾ ಹೊರಗೆ ಸನ್ಯಾಸಿ! ಅಲ್ಲಿ ಏಕಾಂತದಲಿ
ಸಾಧಿಸುವೆ ಏನನ್ನು? ಬಾ ಹೊರಗೆ ನೋಡಿಲ್ಲಿ
ಶತಕೋಟಿ-ಯೋಜನ-ವಿಶಾಲ ವಿಶ್ವದ ಸ್ಥಿತಿಯು!
ಕಾದಿಹುದು ನಿನಗಾಗಿ ದೇಶಸೇವೆಯ ಪೂಜೆ!
ಅನ್ನಅಂಬಲಿಗಾಗಿ ದುರ್ದಶೆಗೆ ತುತ್ತಾಗಿ
ಹೊರಳಾಡುತಿದೆ ಎಲ್ಲ ಲೋಕ; ಬರಗಾಲದಲಿ
ಮುಳುಗಿ ತಳಮಳಿಸುತ್ತ ಕಂಗೆಟ್ಟು ನರಳುತಿದೆ!
ಹೊಲೆ ಮೀರಿ ಹೊಲಸಾಗಿ ನಾರುತಿದೆ ಜಗವೆಲ್ಲ!
ಏಕಾಂತ ಧ್ಯಾನವಿದು ಅವನ ಮುಟ್ಟುವದೆಂತು!
ದೀನ ಜನರೆದೆಯುರಿಯ ಜ್ವಾಲೆಯಲಿ ಪರಮಾತ್ಮ-
ಸಾನ್ನಿಧ್ಯವಿದೆ ನೋಡು! ಬಾ ಹೊರಗೆ ಸನ್ಯಾಸಿ!
ಆ ಜ್ವಾಲೆಯನು ತಣಿಸು. ಅದು ಸೇವೆ! ಅದು ಪೂಜೆ!

ಮೇಲೆ ಬರೆದ ಕವನವನ್ನು ಓದಿಕೊಂಡು ಕೆಳಗೆ ಕೊಟ್ಟ ಪ್ರಶ್ನಗಳಿಗೆ ಉತ್ತರ ಕೊಡಿರಿ:—

(೧) ಸನ್ಯಾಸಿಯು ಮಾಡುವ ಪೂಜೆಯು ಯಾವುದು?

(೨) ಅವನಿಗೆ ಪೂಜೆಯನ್ನು ಬಿಟ್ಟುಕೊಟ್ಟು ಏನು ಮಾಡೆಂದು ಕವಿಯು ಹೇಳುತ್ತಾನೆ?

(೩) ಬರಗಾಲದ ಪರಿಸ್ಥಿತಿಯನ್ನು ಕವಿಯು ಹೇಗೆ ವರ್ಣಿಸಿದ್ದಾನೆ?

(೪) ದೇವರು ನಿಜವಾಗಿ ನಮಗೆ ಎಲ್ಲಿ ಕಾಣುವನು?

(೫) ಕವಿಯು ಸನ್ಯಾಸಿಗೆ ಯಾರ ಪೂಜೆಯನ್ನು ಮಾಡಲು ಹೇಳುವನು?

— ೨೦ —

ಕೆಳಗಿನ ವಾಕ್ಯಾವಳಿಯನ್ನು ಓದಿ ಅರ್ಥ ತಿಳಿದುಕೊಂಡು ಮುಂದೆ ಕೊಟ್ಟ ಪ್ರಶ್ನಗಳಿಗೆ ಉತ್ತರಗಳನ್ನು ಬರೆಯಿರಿ:—

ನಮ್ಮಲ್ಲಿ ರೂಢಮೂಲವಾದ ದೈವವಾದವನ್ನು ಕಿತ್ತೊಗೆದು ಪ್ರಯತ್ನವಾದವನ್ನು ನಾವು ಅವಲಂಬಿಸಬೇಕು. ಆತ್ಮವಿಶ್ವಾಸಪೂರ್ಣವಾದ, ಎಂದೂ ನೈರಾಶ್ಯವನ್ನು ಹೊಂದದ ಪ್ರಯತ್ನವಾದವು ನಮ್ಮ ದೇಶದಲ್ಲಿ ಎಲ್ಲ ಸ್ತ್ರೀಪುರುಷರಲ್ಲಿಯೂ ಆಬಾಲವೃದ್ಧರಲ್ಲಿಯೂ ರೂಢಮೂಲವಾದ ಹೊರತು ನಮ್ಮ ಸಮಾಜದ ರಾಷ್ಟ್ರದ ಉನ್ನತಿಯು ದೂರತೋಪಾಸ್ತವೇ ಸರಿ. ಇಂಥ ಪ್ರಯತ್ನವಾದದ ಗಾಳಿಯು ಸದ್ಯಕ್ಕೆ ಪಶ್ಚಿಮದಿಂದ ನಮ್ಮ ದೇಶದ ಕಡೆಗೆ ಬೀಸುತ್ತಿದ್ದರೂ ನಮ್ಮ ಅಗಾಧವಾದ ಧರ್ಮವಿಚಾರಸಾಗರಕ್ಕೆ ಇದೇನೂ ಹೊಸದಲ್ಲ. ಪ್ರಯೊಬ್ಬನು ಯುಕ್ತವಾದ ಕರ್ಮಗಳನ್ನು ಮಾಡುತ್ತ ನೂರು ವರ್ಷ ಬಾಳಲಿಕ್ಕೆ ಇಚ್ಛಿಸಬೇಕೆಂದು ಉಪನಿಷತ್ತು ಹೇಳಿ ಮನುಷ್ಯಪ್ರಯತ್ನಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿದೆ. ನಮ್ಮ ಧರ್ಮಶಾಸ್ತ್ರಗಳಂತೂ “ ಹೀಗೆ ಮಾಡು, ಹಾಗೆ ಮಾಡಬೇಡ. ” ಎಂದು ಅನೇಕ ವಿಧಿನಿಷೇಧಗಳನ್ನು ಹೇಳಿ ಸ್ವಪ್ರಯತ್ನದಿಂದಲೇ ಆತ್ಮೋದ್ಧಾರವು ಮತ್ತು ಸಮಾಜದ ಸುಸ್ಥಿತಿಯು ಎಂದು ಘಂಟಾಘೋಷವಾಗಿ ಸಾರುತ್ತಿವೆ ಸಾಧುಸಂತರನೇಕರು ಪೌರುಷದ ಪುರಸ್ಕಾರವನ್ನು ಮಾಡಿ ಅನೇಕರೀತಿಯಿಂದ ಅದರ ಗುಣಗಾನವನ್ನು ಮಾಡಿದ್ದಾರೆ. ಆದುದರಿಂದ ಇನ್ನಾದರೂ ನಾವು ಆಲಸ್ಯಕ್ಕೂ ನೈರಾಶ್ಯಕ್ಕೂ ಅವಕಾಶವನ್ನು ಕೊಡದೆ ಆತ್ಮವಿಶ್ವಾಸದಿಂದಲೂ ಉತ್ಸಾಹದಿಂದಲೂ ದೃಢನಿಶ್ಚಯದಿಂದ

ಲೂ ನಮ್ಮ ಹಾಗೂ ನಮ್ಮ ಊರು, ನಮ್ಮ ಪ್ರಾಂತ, ನಮ್ಮ ಭಾಷೆ, ನಮ್ಮ ದೇಶ ಇವುಗಳ ಉನ್ನತಿಗಾಗಿ ಪ್ರಯತ್ನವನ್ನು ಮಾಡಲಿಕ್ಕೆ ಬೇಕು. ವಿಚಾರಪೂರ್ವಕವಾಗಿ ಪದ್ಧತಿಹಿಡಿದು ಮಾಡಿದ ಪ್ರಯತ್ನದಲ್ಲಿಯೇ ಈಶ್ವರನ ಅಧಿಷ್ಠಾನವಿದೆ ಎಂಬುದನ್ನು ನಾವು ಕೃತಿಯಿಂದ ತೋರಿಸಲಿಕ್ಕೆ ಬೇಕು.

(೧) ದೈವವಾದವೆಂದರೇನು?

(೨) ಪ್ರಯತ್ನವು ಯಶಸ್ವಿಯಾಗಲಿಕ್ಕೆ ಆವಶ್ಯಕ ಸಂಗತಿಗಳು ಯಾವವು?

(೩) 'ಪಶ್ಚಿಮದ ಗಾಳಿ ಬೀಸುತ್ತಿದೆ' ಅಥವಾ 'ಪ್ರಯತ್ನದಲ್ಲಿ ಈಶ್ವರನ ಅಧಿಷ್ಠಾನವಿದೆ' ಇವುಗಳಲ್ಲೊಂದರ ಅರ್ಥವನ್ನು ಸ್ಪಷ್ಟೀಕರಿಸಿರಿ.

(೪) ದೈವವಾದ ಮತ್ತು ಪ್ರಯತ್ನವಾದ ಇವುಗಳಲ್ಲಿ ಯಾವದು ನಿಮ್ಮ ಮನಸ್ಸಿಗೆ ಒರುತ್ತದೆ? ಯಾಕೆ?

(೫) ನಮ್ಮ ಧರ್ಮಗ್ರಂಥಗಳು ಯಾವ ವಾದಕ್ಕೆ ಬೆಂಬಲ ಕೊಟ್ಟಿವೆ? ಯಾವ ರೀತಿಯಿಂದ?

— ೨೧ —

ಒಂದಾನೊಂದು ಕಾಲದಲ್ಲಿ ಅಪಾರವಾದ ಸಂಪತ್ತಿಯ ಬೀಡು ಎನಿಸಿ ಮೆರೆದ ಭರತಭೂಮಿಯ ಆ ಸಂಪತ್ತು ಈಗ ಎಲ್ಲಿ ಮಾಯವಾಯಿತು? ನಮ್ಮ ನಾಡು ಈಗ ಜಗತ್ತಿನ ಬಡನಾಡುಗಳಲ್ಲಿ ಎಣಿಕೆಯಾಗುತ್ತಿದೆಯಲ್ಲ! ಭಾರತೀಯನ ತಿಂಗಳ ಸರಾಸರಿ ಹುಟ್ಟುವಳಿ ಹತ್ತು ರೂಪಾಯಿಗಿಂತ ಕಡಿಮೆ; ಮನೆಗೊಂದು ರೇಡಿಯೋ ತಲೆಗೊಂದು ಮೋಟಾರು ಈ ನಾಡಿಗೆ ಕನಸಿನಲ್ಲಿಯೇ ಸರಿ ಎಂದು ಮೊದಲಾಗಿ ನಮ್ಮ ನಾಡಿನ ಬಡತನ

ವನ್ನು ವಿದ್ವಾಂಸರು ಸಮಸರಿಯಿಂದ ತೋರಿಸುತ್ತಿರುವರಲ್ಲ !

ಹೀಗಿದ್ದರೂ ನಾನು ಮಾತ್ರ ಭಾರತವು ಇನ್ನೂ ಸಂಪತ್ತಿನ ನಾಡೆಂದೇ ಹೇಳುತ್ತೇನೆ. ಹಾಗಾದರೆ ಈ ನಾಡಿನ ಸಂಪತ್ತು ಯಾವದು ? ಸರಕಾರದ ಬೊಕ್ಕಸದೊಳಗಿನ ನೋಟಿನ ಪುಡಿಕೆಗಳೋ ? ಸಂಸ್ಥಾನಿಕರ ಅರಮನೆಯೊಳಗಿನ ಮುತ್ತುರತ್ನಗಳೋ ? ಬ್ಯಾಂಕುಗಳಲ್ಲಿಯ ಶ್ರೀಮಂತರ ಲಕ್ಷಾವಧಿ ರೂಪಾಯಿಗಳ ಇಡುಗಂಟುಗಳೋ ? ಅಲ್ಲ; ಇದಾವುದೂ ಸಂಪತ್ತೆಂದು ನಾನು ಗಣಿಸಲಾರೆ. ವನಸ್ಪತಿಗಳ, ಪೈರುಗಳ ಬೆಳವಣಿಗೆಗೆ ಹದವಾದ ಸೆಕೆಯನ್ನೊದಗಿಸುತ್ತ ನಮ್ಮ ನಾಡಿನ ಮೇಲೆ ಬೆಳಗುವ ಸೂರ್ಯನೂ, ನಮ್ಮ ನಾಡಿನ ಫಲದ್ರೂಪವಾದ ಭೂಮಿಯೂ. ಭೂಮಿಗೆ ನೀರುಣಿಸುವ ಹೊಳೆಗಳೂ, ಖನಿಜಗಳನ್ನೊಳಗೊಂಡ ಬೆಟ್ಟಗಳೂ, ನೈತಿಕ ಬಲದಿಂದ ಕಂಗೊಳಿಸುವ ಕೋಟಿ ಕೋಟಿ ಜನರೂ, ಇದಕ್ಕೂ ಹೆಚ್ಚಾಗಿ ನಮ್ಮ ನಾಡಿನಲ್ಲಿ ಜನ್ಮವೆತ್ತ ಬೋಸ, ರಾಮನ್, ರಾಮಾನುಜಂ, ಠಾಕೂರ್, ವಿಶ್ವೇಶ್ವರಯ್ಯ ಮೊದಲಾದ ಮೇಧಾವಿಗಳೂ ಈ ನಾಡಿನ ಸಂಪತ್ತೆಂದು ನಾನು ಹೇಳಬಲ್ಲೆ.

ಮೇಲಿನ ವಾಕ್ಯವೃಂದಗಳನ್ನು ಓದಿ ಕೆಳಗೆ ಬರೆದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:—

(೧) ನಮ್ಮ ನಾಡಿನ ಬಡತನವು ಯಾವ ಯಾವ ಮಾತುಗಳಿಂದ ಸೂಚಿತವಾಗಿದೆ ?

(೨) ನಮ್ಮ ಜನರ ಆಯುರ್ಮರ್ಯಾದೆಯು ಬಡತನವನ್ನು ಹೇಗೆ ಸೂಚಿಸುತ್ತದೆ ?

(೩) ಸಾಮಾನ್ಯ ಜನರು ಸಂಪತ್ತೆಂದು ಏತಕ್ಕೆ ಕರೆಯುವರು ?

(೪) ನಮ್ಮ ನಿಜವಾದ ಸಂಪತ್ತು ಯಾವದು ?

(೫) 'ನೈತಿಕ ಬಲದಿಂದ ಕಂಗೊಳಿಸುವ ಜನರು' ಹೀಗೆಂದರೇನು ?

—೨೨—

ನಗು ನಗು ಮಗುವೇ | ಬಗೆಬಗೆಯಿಂದಲಿ | ನಿನಗೆ ಸೊಗಸನು ಬೀರುತ ಮನಕೆ || ಮುಗಿಲೊಳು ನಗುತಲಿ । ಸೊಗಯಿಪ ಚಂದ್ರನ । ಮೊಗವನು ನೋಡುತ ಕುಲುಕುಲು ನೀ ॥ ೧ ॥

ಹಣಿಕಿಡುತಲಿಯೆ | ನ್ನಣಕಿಪುದೇತಕೆ | ಗುಣಹೀನರವೊಲ್ ಚಂದ್ರಮನೇ ॥ ಕೆಣಕಲು ನೀಂ ಗಡ | ಸೆಣಸುತ ನಿನ್ನನು | ಕುಣಿಸದೆ ಬಿಡುವೆನೆ ನೋಡೆಂದು ॥ ೨ ॥

ತರಣಿಯ ಸಿರಿಯಿದು । ಎರವಿರೆ ನಿನ್ನೊಳು |ಗರುವಿಕೆ ಎಂತೋ | ಅರಿಯೆನು ನಾ ॥ ಗರುವದ ಪರಿಯಿದು । ಸರಿಯಾಗದು ಹಿಮ | ಕರನೇ ಕರಪಿಡಿದಾಡೆಂದು ॥ ೩ ॥

ಎಳೆ ನಗೆ ಬೆಳದಿಂ | ಗಳಡಿಂ ವದನ ಕ | ಮಲವೆನ್ನದು ನಲಿದಲರುವದು || ಇಳೆಯೊಳಗಿದರಾ | ಬಲು ಸೋಜಿಗವನು | ತಿಳಿಯೆನು ತರಳನೆ ನಗು ನಗು ನೀ ॥ ೪ ॥

ಕುಲುಕುಲು ನಗುವ ಹ | ಸುಳನ ಮೊಗವ ನೋ | ಡಲು ಪೂರ್ವದ ಪುಣ್ಯವೆ ಬೇಕು || ಸುಲಲಿತ ಕಾವ್ಯವ । ಬಲು ಸೊಗಸಿಂ ಪೇ । ಳಲು ಪರಮಾತ್ಮನ ಕೃಪೆ ಬೇಕು ॥ ೫ ॥

ಮೇಲಿನ ಕವಿತೆಯನ್ನು ಓದಿ ಅರ್ಥ ತಿಳಿದುಕೊಂಡು ಈ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ:—

(೧) ಈ ಕವಿತೆಯನ್ನು ಯಾರು ಅಂದಿರಬಹುದು? ಇದಕ್ಕೆ ಯಾವ ಹೆಸರನ್ನು ಕೊಡಬಹುದು?

(೨) ಎರಡನೆಯ ಪದ್ಯದ ತಾತ್ಪರ್ಯವೇನು?

(೩) ಮೂರನೆಯ ಪದ್ಯದಲ್ಲಿ ಬಂದ ಬುದ್ಧಿಯ ಮಾತಾವುದು?

(೪) ನಾಲ್ಕನೆಯ ಪದ್ಯದಲ್ಲಿಯ ಸೋಜಿಗವನ್ನು ಸ್ಪಷ್ಟಪಡಿಸಿರಿ.

(೫) ಕೊನೆಯ ಪದ್ಯದಲ್ಲಿ ಸೂಚಿಸಿದ ಅಭಿಪ್ರಾಯವನ್ನು ವಿವರಿಸಿ ಬರೆಯಿರಿ.

—೨೩—

ಓ ನನ್ನ ತಾಯೆ ಭಾರತವರ್ಷವೇ, ನಿನ್ನ
ಪೂರ್ವದೈಶ್ವರ್ಯವನು ನೆನೆಯೆ ನನ್ನೆದೆಯುಬ್ಬಿ
ಹೆಮ್ಮೆಯಲಿ ಬೀಗುವುದು; ಒಡನೆ ಮನದಲಿ ಮಬ್ಬ
ಕವಿಸುವುದು ದೇವಿ ಈ ಬಾಳಿನಿಂದಿನ ಬನ್ನ
ಅಂದು ಮುಗಿಲನು ಮುಟ್ಟಿ ಮೂರು ಲೋಕದ ಕಣ್ಣ
ತನ್ನೆಡೆಗೆ ಸೆಳೆದು, ಸ್ವರ್ಗವನು ಭೂಮಿಗೆ ದತ್ತು
ಮಾಡಿತಂದಾ ನಿನ್ನ ಸೌವರ್ಗದ ಸಂಪತ್ತು
ಏನಾಯಿತೌ? ಎತ್ತ ಹೋಯ್ತು ಕೀರ್ತಿಯ ಜ್ಯೋತ್ಸ್ನೆ?
ಮರಳಿ ಬರುವುದು ಎಂದು ತಾಯೆ ಆ ಸಿತಪಕ್ಷ?
ಅಂದಿನವೊಲೆಂದು ನೀ ಮರಳಿ ನಿನ್ನೀ ಹಸಿದ
ಮಕ್ಕಳನು ಜಸದ ಬೆಳದಿಂಗಳಲಿ ಕುಳ್ಳಿರಿಸಿ

ಆ ಶಾಸ್ತ್ರ ಸಂಗೀತ ಕಾವ್ಯ ಕಲೆಗಳ ರಸದ
ಸವಿ ತುತ್ತನುಣಿಸುವೆ? ಎಂದು ಹಾಕುವೆ ರಕ್ಷೆ
ಎಂದೆಂದಿಗೂ ಸುಖಿಸಿ ಎಂದು ನಮ್ಮನು ಹರಸಿ
ಸಿತಪಕ್ಷ, ಶುಕ್ಲಪಕ್ಷ. ಜೊನ್ನ, ಬೆಳದಿಂಗಳು

ಮೇಲಿನ ಕವಿತೆಯನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ನಿಮ್ಮ ಮಾತುಗಳಲ್ಲಿ ಉತ್ತರ ಬರೆಯಿರಿ:—

[೧] ಹಿಂದುಸ್ಥಾನದ ಹಿಂದಿನ ಮತ್ತು ಇಂದಿನ ಸ್ಥಿತಿಯನ್ನು ನೋಡಿ ಕವಿಯ ಮನಸ್ಸಿನ ಮೇಲೆ ಆದ ಪರಿಣಾಮಗಳು ಯಾವವು?

[೨] ಹಿಂದುಸ್ಥಾನದ ಹಿಂದಿನ ಸಂಪತ್ತನ್ನು ಕವಿಯು ಯಾವ ಮಾತುಗಳಲ್ಲಿ ಹೇಳಿರುವನು?

[೩] ಭಾರತ ಮಾತೆಯಿಂದ ಕವಿಯು ಏನನ್ನು ಬಯಸುತ್ತಾನೆ?

[೪] 'ಮರಳಿ ಬರುವುದು ತಾಯೆ ಆ ಸಿತಪಕ್ಷ' ಇದನ್ನು ಸ್ಪಷ್ಟೀಕರಿಸಿರಿ.

-•-೨೪-•-

ಸಾಯುತಿದೆ ನಿಮ್ಮ ನುಡಿ ಓ ಕನ್ನಡದ ಕಂದರಿರ!
ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ.
ರಾಜನುಡಿಯೆಂದೊಂದು ರಾಷ್ಟ್ರನುಡಿಯೆಂದೊಂದು
ದೇವನುಡಿಯೆಂದೊಂದು ಹತ್ತಿ ಜಗ್ಗಿ
ನಿರಿನಿಟಿಲು ನಿಟಿಲೆಂದು ಮುದಿಯೆಲುವು ಮುರಿಯುತಿದೆ

ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ

....

ನಿಮ್ಮ ನುಡಿ ನಿಮ್ಮ ಗಂಡಸುತನಕೆ ಹಿರಿಸಾಕ್ಷಿ,
ಬಲವಿದ್ದರದಕೆ ನಿಮಗಿಹುದು ಶಕ್ತಿ
ಉತ್ತರದ ಕಾಶಿಯಲಿ ಕತ್ತೆ ಮಿಂದೈತರಲು
ದಕ್ಷಿಣದ ದೇಶಕದು ಕುದುರೆಯಹುದೆ ?
ತಾಯಿತ್ತ ಮೊಲೆಹಾಲು ನಿಮ್ಮ ಮೈಗಾಗದಿ
ಕತ್ತೆಹಾಲ್ ಬಲಕೊಡುವ ನೆತ್ತರಹುದೇ ?
ಕಣ್ದೆರೆಯಿರೇಳಿ ಓ ಕನ್ನಡದ ಮಕ್ಕಳಿರ !

ಮೇಲಿನ ಏಡು ನುಡಿಗಳನ್ನು ಓದಿ ಉತ್ತರ ಬರೆಯಿ :-

[೧] ಕನ್ನಡ ತಾಯಿಯ ಬೆನ್ನೆಲವು ಮುರಿಯುವಂತೆ ಆಕೆಯ ಮೇಲೆ ಯಾವ ಯಾವ ಭಾಷೆಗಳ ಭಾರಗಳು ಬಿದ್ದಿವೆ ಯೆಂದು ಕವಿಯು ಹೇಳಿದ್ದಾನೆ ?

[೨] ಕತ್ತೆಯ ದೃಷ್ಟಾಂತವನ್ನು ಇಲ್ಲಿ ಯಾವ ಮಾತಿಗಾಗಿ ಹೇಳಿದ್ದಾನೆ ?

[೩] ತಾಯ್ನುಡಿಯೆ ನಮಗೆ ಹಿತಕರ ಎಂಬುದನ್ನು ಯಾವ ಮಾತಿನಿಂದ ತೋರಿಸಿದ್ದಾನೆ ?

[೪] ಎರಡನೆಯ ನುಡಿಯ ಮೊದಲಿನ ಎರಡು ಸಾಲಗಳ ಅರ್ಥವನ್ನು ಸ್ಪಷ್ಟಪಡಿಸಿರಿ.